# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ್ನು ಪ್ರಾರಂಭಿಸುವ ಕುರಿತು ಸಲಹೆ ನೀಡಲು ಸಮಿತಿ ರಚಿಸುವ ಬಗ್ಗೆ

ಉಲ್ಲೇಖ: ದಿನಾಂಕ: 19-07-2016 ರಂದು ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಭಾಂಗಣದಲ್ಲಿ ನಡೆದ ಸಭೆಯ ನಡವಳಿಗಳು

* * * * * *

ಪ್ರಸ್ತಾವನೆ:-

ಡಾ.ಬಿ.ಆರ್. ಅಂಬೇಡ್ಕರ್ ರವರ 125 ನೇ ಜನ್ಮದಿನಾಚರಣೆಯ ಈ ಸಂದರ್ಭದಲ್ಲಿ ಅವರ ಹೆಸರಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ್ನು ಪ್ರಾರಂಭಿಸುವುದು ಸೂಕ್ತವೆಂದು ಅವರು ವ್ಯಾಸಾಂಗ ಮಾಡಿರುವ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಮಾದರಿಯಲ್ಲಿಯೇ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ್ನು ಪ್ರಾರಂಭಿಸುವ ಕುರಿತು ಸಲಹೆ ಸೂಚನೆಗಳನ್ನು ನೀಡಲು ದಿನಾಂಕ 19ನೇ ಜುಲೈ 2016ರಂದು ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಣಯಿಸಿರುವಂತೆ ಸಮಿತಿ ರಚಿಸಲು ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016 (ಭಾ)**
**ಬೆಂಗಳೂರು, ದಿನಾಂಕ: 20ನೇ ಜುಲೈ 2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ್ನು ಪ್ರಾರಂಭಿಸುವ ಕುರಿತು ಸಲಹೆ ಸೂಚನೆಗಳನ್ನು ನೀಡಲು ಈ ಕೆಳಕಂಡಂತೆ ಒಂದು ಸಮಿತಿಯನ್ನು ರಚಿಸಿ, ಆದೇಶಿಸಿದೆ.

1. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು – ಅಧ್ಯಕ್ಷರು
2. ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ – ಸದಸ್ಯರು
3. ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ – ಸದಸ್ಯರು
4. ಸಲಹೆಗಾರರು, ಸಮಾಜ ಕಲ್ಯಾಣ ಇಲಾಖೆ – ಸದಸ್ಯರು
5. ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ – ಸದಸ್ಯರು
6. ಡಾ.ಎನ್. ಪ್ರಭುದೇವ್, ವಿಶ್ರಾಂತ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ – ಸದಸ್ಯರು – ಸದಸ್ಯರು
7. ಪ್ರೊ|| ಆರ್.ಎಸ್. ದೇಶಪಾಂಡೆ, ನಿಕಟಪೂರ್ವ ನಿರ್ದೇಶಕರು, ಐ.ಎಸ್.ಇ.ಸಿ. – ಸದಸ್ಯರು
8. ಪ್ರೊ|| ಎಸ್.ಎ. ಕೋರಿ, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು – ಸದಸ್ಯ ಕಾರ್ಯದರ್ಶಿ

ಸಮಿತಿಯು ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ್ನು ಪ್ರಾರಂಭಿಸುವ ಸಂಬಂಧ ಪರಿಶೀಲಿಸಿ, ಕ್ರಿಯಾ ಯೋಜನೆ, ಅಂದಾಜು ವೆಚ್ಚ, ಇತ್ಯಾದಿ ವಿವರಗಳನ್ನು ಒಳಗೊಂಡಂತೆ ಅಂಬೇಡ್ಕರ್

..2

ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯನ್ನು ವಿಶ್ವದಲ್ಲಿಯೇ ಅತಿ ಶ್ರೇಷ್ಠ ಮಟ್ಟದ ಸಂಸ್ಥೆಯನ್ನಾಗಿ ಮಾಡಲು ಅಗತ್ಯವಾದ ಸಲಹೆ/ಸೂಚನೆಗಳನ್ನು 15 ದಿನಗಳೊಳಗಾಗಿ ಸರ್ಕಾರಕ್ಕೆ ನೀಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಲ್. ಸುಬ್ರಮಣ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2)

**ಇವರಿಗೆ:**

1. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸಲಹೆಗಾರರು (ಶ್ರೀ ವೆಂಕಟಯ್ಯ), ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಿ & ಆರ್), ವಿಧಾನ ಸೌಧ, ಬೆಂಗಳೂರು.
5. ಪ್ರೊ.ಎಸ್.ಎ. ಕೋರಿ, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು
6. ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
7. ಡಾ.ಪ್ರಭುದೇವ್, ಮಾಜಿ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ
8. ಪ್ರೊ. ಆರ್.ಎಸ್. ದೇಶಪಾಂಡೆ, ಹಿಂದಿನ ನಿರ್ದೇಶಕರು, ಐ.ಎಸ್.ಇ.ಸಿ.

**ಪ್ರತಿಯನ್ನು ಮಾಹಿತಿಗಾಗಿ:-**

1. ಆಡಳಿತಾಧಿಕಾರಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು.
2. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು ಮತ್ತು ಸಮನ್ವಯ).
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

= = =

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ್ನು ಸ್ಥಾಪಿಸಲು ಬೆಂಗಳೂರು ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಜಮೀನು ಒದಗಿಸುವ ಬಗ್ಗೆ.

ಓದಲಾಗಿದೆ:-

ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಇವರ ಪತ್ರ ಸಂಖ್ಯೆ: ಕುಪಕಾ/ ಡಾ: ಬಿ.ಆರ್.ಅಂ.ಸ್ಕೂ.ಎ/2016, ದಿನಾಂಕ: 16-11-2016.

---

ಪ್ರಸ್ತಾವನೆ:-

ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಇವರು ಮೂಲತ: ಒಬ್ಬ ಅರ್ಥಶಾಸ್ತ್ರಜ್ಞರಾದ ಕಾರಣ ಅವರ 125ನೇ ಜನ್ಮದಿನಾಚರಣೆಯನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಅವರ ಹೆಸರಿನಲ್ಲಿ ಜಾಗತಿಕ ಗುಣಮಟ್ಟದ ಅರ್ಥಶಾಸ್ತ್ರ ಶಾಲೆಯನ್ನು ಸ್ಥಾಪಿಸಲು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣದ ಸರ್ವೆ ನಂ.6 ಮತ್ತು 65ರಲ್ಲಿ ಭಾಗಶಃ ಜಾಗ ಹಾಗೂ ಸರ್ವೆ ನಂ.81, 82, 83ರಲ್ಲಿ ಸಂಪೂರ್ಣ ಜಾಗ ಸೇರಿದಂತೆ ಒಟ್ಟಾರೆ 43.35 ಎಕರೆ ಜಮೀನನ್ನು ಗುರುತಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣದಲ್ಲಿ ಗುರುತಿಸಲಾಗಿರುವ ಒಟ್ಟಾರೆ 43.35 ಎಕರೆ ಜಮೀನನ್ನು ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸ್ಥಾಪನೆಗಾಗಿ ಗುತ್ತಿಗೆ ಆಧಾರದ ಮೇಲೆ ನೀಡಲು ದಿ: 15-11-2016ರಂದು ನಡೆದ ಬೆಂಗಳೂರು ವಿಶ್ವವಿದ್ಯಾಲಯದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ನಿರ್ಣಯದ ಆಧಾರದ ಮೇಲೆ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಇವರು ಮೇಲೆ ಓದಲಾದ ಪತ್ರದನ್ವಯ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣದ ಸರ್ವೆ ನಂ.6 ಮತ್ತು 65ರಲ್ಲಿ ಭಾಗಶಃ ಜಾಗ ಹಾಗೂ ಸರ್ವೆ ನಂ.81, 82, 83ರಲ್ಲಿ ಸಂಪೂರ್ಣ ಜಾಗ ಸೇರಿದಂತೆ ಒಟ್ಟಾರೆ 43.35 ಎಕರೆ ಜಮೀನನ್ನು ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸ್ಥಾಪನೆಗಾಗಿ ಗುತ್ತಿಗೆ ಆಧಾರದ ಮೇಲೆ ನೀಡಲು ಸರ್ಕಾರದ ಪೂರ್ವಾನುಮೋದನೆಯನ್ನು ಕೋರಿರುತ್ತಾರೆ.

ವಿಶ್ವವಿದ್ಯಾಲಯದ ಚರ ಮತ್ತು ಸ್ಥಿರ ಸ್ವತ್ತನ್ನು ಗುತ್ತಿಗೆ ಕೊಡಲು/ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ಪ್ರಕರಣ 3(4)ರನ್ವಯ ಸರ್ಕಾರದ ಪೂರ್ವಾನುಮೋದನೆ ಅವಶ್ಯಕತೆಯಿರುತ್ತದೆ. ಈ ಹಿನ್ನೆಲೆಯಲ್ಲಿ ತುಮಕೂರು ವಿಶ್ವವಿದ್ಯಾಲಯದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016 (ಭಾಗ-3), ಬೆಂಗಳೂರು ದಿನಾಂಕ: 4-1-2017**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣದ ಸರ್ವೆ ನಂ.6 ಮತ್ತು 65ರಲ್ಲಿ ಭಾಗಶಃ ಜಾಗ ಹಾಗೂ ಸರ್ವೆ ನಂ.81, 82, 83ರಲ್ಲಿ ಸಂಪೂರ್ಣ ಜಾಗ ಸೇರಿದಂತೆ ಒಟ್ಟಾರೆ 43.35 ಎಕರೆ ಜಮೀನನ್ನು ಪ್ರತಿ ಎಕರೆಗೆ ರೂ.1,000/-ರ ವಾರ್ಷಿಕ ಗುತ್ತಿಗೆ ಶುಲ್ಕ ನಿಗದಿಪಡಿಸಿ 30 ವರ್ಷಗಳ ಅವಧಿಗೆ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸ್ಥಾಪನೆಗಾಗಿ ಗುತ್ತಿಗೆ ಆಧಾರದ ಮೇಲೆ ನೀಡಲು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 3(4)ರನ್ವಯ ಅಗತ್ಯವಿರುವ ಸರ್ಕಾರದ ಪೂರ್ವಾನುಮೋದನೆಯನ್ನು ನೀಡಿ ಆದೇಶಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎ.ಅಸದ್ ಜಾನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-2)

04/01/17

ಇವರಿಗೆ:-

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.

3) ಕುಲಪತಿಗಳು/ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಅರಮನೆ ರಸ್ತೆ, ಬೆಂಗಳೂರು.

ಪ್ರತಿ:-

1) ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಉನ್ನತ ಶಿಕ್ಷಣ) ಯವರ ಆಪ್ತ ಕಾರ್ಯದರ್ಶಿಗಳು.
3) ಸರ್ಕಾರದ ಉಪ ಕಾರ್ಯದರ್ಶಿ (ವಿಶ್ವವಿದ್ಯಾಲಯಗಳು)ಯವರ ಆಪ್ತ ಸಹಾಯಕರು.
4) ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

---

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್(BASE) ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ:-

3. ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016(ಭಾ), ಬೆಂಗಳೂರು, ದಿನಾಂಕ 20.07.2016.
4. ಸರ್ಕಾರಿ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016 (ಭಾಗ-3), ಬೆಂಗಳೂರು ದಿನಾಂಕ 04.01.2017.

---

ಪ್ರಸ್ತಾವನೆ:-

ಭಾರತ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಇವರು ಮೂಲತ: ಒಬ್ಬ ಅರ್ಥಶಾಸ್ತ್ರಜ್ಞರಾದ ಕಾರಣ ಅವರ 125ನೇ ಜನ್ಮದಿನಾಚರಣೆಯ ಸ್ಮರಣಾರ್ಥವಾಗಿ ಹಾಗೂ ಅವರ ಉತ್ಕೃಷ್ಟ ಆರ್ಥಿಕ ದೂರದೃಷ್ಟಿ ಹಾಗೂ ಕಲ್ಪನೆಗಳನ್ನು ಸಾಕಾರಗೊಳಿಸುವ ಸದುದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಡುವಂತಹ ಅರ್ಥಶಾಸ್ತ್ರ ಶಾಲೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಪರಿಗಣಿಸಿದ ಸರ್ಕಾರ ಅವರ ಹೆಸರಿನಲ್ಲಿ ಅರ್ಥಶಾಸ್ತ್ರಶಾಲೆಯನ್ನು ಸಮಾಜ ಕಲ್ಯಾಣ ಇಲಾಖೆಯ ಸಹಕಾರ ಹಾಗೂ ಆರ್ಥಿಕ ಸಹಾಯದೊಂದಿಗೆ ಸ್ಥಾಪಿಸುವ ಯೋಜನೆಯನ್ನು ಉಪಕ್ರಮಿಸಲಾಗಿತ್ತು.

ಉನ್ನತ ಶಿಕ್ಷಣ ಇಲಾಖೆಯಲ್ಲಿ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನ ಕಾಯ್ದೆ, 2013ರಡಿ ಬಳಕೆಯಾಗದ ಇರುವ ಮೊತ್ತ ಲೆಕ್ಕಶೀರ್ಷಿಕೆ 4202-01-203-0-01 ರಲ್ಲಿ ರೂ.106.96 ಕೋಟಿ ಅನುದಾನವನ್ನು ಪ್ರಸ್ತಾವನೆ ಸಲ್ಲಿಸುವ ಷರತ್ತಿಗೊಳಪಟ್ಟು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯನ್ನು (BASE) ಸ್ಥಾಪಿಸಲು ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯ ನೋಡಲ್ ಏಜೆನ್ಸಿ ಮಾಡಿರುವ ಶಿಫಾರಸ್ಸನ್ನು ದಿನಾಂಕ:15.07.2016ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಅನುಸೂಚಿತ ಜಾತಿ/ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದಿಸಲಾಗಿರುತ್ತದೆ.

ತತ್ಪರಿಣಾಮವಾಗಿ, ಮೂಲತ: ಅರ್ಥಶಾಸ್ತ್ರಜ್ಞರಾದ ಡಾ.ಬಿ.ಆರ್.ಅಂಬೇಡ್ಕರ್ ಇವರ ಆರ್ಥಿಕ ದೂರದೃಷ್ಟಿ ಹಾಗೂ ಪರಿಕಲ್ಪನೆಗಳನ್ನು ಸಾಕಾರಗೊಳಿಸಲು, ಖ್ಯಾತ ಆರ್ಥಿಕ ತಜ್ಞರನ್ನು ರೂಪಿಸಲು, ಶೈಕ್ಷಣಿಕ ಹಾಗೂ ಸಾಂಸ್ಥಿಕ ಸ್ವಾಯತ್ತತೆ ಹಾಗೂ ಸ್ವಾವಲಂಬಿತನ ಸ್ಥಾಪಿಸಲು ಅನುವಾಗುವ ಆಡಳಿತ ವ್ಯವಸ್ಥೆಯನ್ನು ರೂಪಿಸಲು ಹಾಗೂ ಶಿಕ್ಷಣ ಮತ್ತು ಆರ್ಥಿಕ ನಿರ್ವಹಣೆ ಕ್ಷೇತ್ರಗಳಲ್ಲಿ ಉತ್ಕೃಷ್ಟ ಸಂಶೋಧನೆ ಕೈಗೊಳ್ಳಲು ಸಹಕಾರಿಯಾಗಿರುವ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ರೂಪು-ರೇಷೆಗಳನ್ನು ತಯಾರಿಸಲು ಹಾಗೂ ನೈಪುಣ್ಯ ಸಲಹೆ-ಸೂಚನೆಗಳನ್ನು ನೀಡಲು ಮೇಲೆ ಓದಲಾದ ಕ್ರಮಸಂಖ್ಯೆ(1)ರ ಆದೇಶದನ್ವಯ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಉನ್ನತ ಶಿಕ್ಷಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳ ಮತ್ತು ಶಿಕ್ಷಣ/ಆರ್ಥಿಕ ತಜ್ಞರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿತ್ತು.

ಈ ಮಹಾತ್ವಾಕಾಂಕ್ಷಿ ಯೋಜನೆಯ ಅನುಷ್ಠಾನಕ್ಕಾಗಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಗುರುತಿಸಲಾದ ಸರ್ವೆ ನಂ.6 ಮತ್ತು 65 ರಲ್ಲಿನ ಭಾಗಶ: ಜಾಗ ಹಾಗೂ ಸರ್ವೆ ನಂ:81, 82, 83 ರಲ್ಲಿ ಸಂಪೂರ್ಣ ಜಾಗ ಸೇರಿದಂತೆ ಒಟ್ಟಾರೆ 43.35 ಎಕರೆ ವಿಸ್ತೀರ್ಣದ ಜಮೀನನ್ನು ಪ್ರತಿ ಎಕರೆಗೆ

ರೂ. 1000/-ರ ವಾರ್ಷಿಕ ಗುತ್ತಿಗೆ ಶುಲ್ಕ ನಿಗದಿಪಡಿಸಿ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 3(4)ರನುಸಾರ ಮೇಲೆ ಓದಲಾದ ಕ್ರಮಸಂಖ್ಯೆ(2)ರ ಆದೇಶದಲ್ಲಿ ಸರ್ಕಾರದ ಪೂರ್ವಾನುಮತಿಯನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಪೂರ್ವ ಪ್ರಸ್ತಾಪಿತ ತಜ್ಞರ ಸಮಿತಿಯು ಸಲ್ಲಿಸಿದ ವರದಿಯಲ್ಲಿನ ಪರಿಗಣಿತ ಸಲಹೆ-ಸೂಚನೆ ಹಾಗೂ ಶಿಫಾರಸ್ಸುಗಳ ಬೆಳಕಿನಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಮೂಲತ: ಅರ್ಥಶಾಸ್ತ್ರಜ್ಞರಾದ ಡಾ.ಬಿ.ಆರ್.ಅಂಬೇಡ್ಕರ್ ಇವರ ಆರ್ಥಿಕ ದೂರದೃಷ್ಟಿ ಹಾಗೂ ಪರಿಕಲ್ಪನೆಗಳನ್ನು ಸಾಕಾರಗೊಳಿಸಲು ಅವರ ಹೆಸರಿನಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಡುವಂತಹ ಅರ್ಥಶಾಸ್ತ್ರ ಶಾಲೆಯನ್ನು ಪ್ರಾರಂಭಿಸಲು ತೀರ್ಮಾನಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016, ಬೆಂಗಳೂರು ದಿನಾಂಕ: 16.02.2017

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಭಾರತ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಇವರ 125ನೇ ಜನ್ಮದಿನಾಚರಣೆಯ ಸ್ಮರಣಾರ್ಥವಾಗಿ ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (BASE)ನ್ನು ಸ್ವತಂತ್ರ ಸ್ವಾಯತ್ತ ಸಂಸ್ಥೆಯಾಗಿ 2017-18ನೇ ಶೈಕ್ಷಣಿಕ ಸಾಲಿನಿಂದ ಕಾರ್ಯಾರಂಭಿಸುವಂತೆ ಸ್ಥಾಪಿಸಲಾಗಿದೆ.

ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಪರಿಷತ್ತು ನೀಡಿರುವ ಅನುಮೋದನೆಯ ಮೇರೆಗೆ ಉನ್ನತ ಶಿಕ್ಷಣ ಇಲಾಖೆಗೆ ಮಂಜೂರು ಆಗಿರುವ ಅನುಸೂಚಿತ ಜಾತಿಗಳ ಉಪಯೋಜನೆ ಹಾಗೂ ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತದ ಬಂಡವಾಳ ಲೆಕ್ಕಶೀರ್ಷಿಕೆಯಡಿಯಲ್ಲಿನ ಅನುದಾನ ರೂ.106.96 ಕೋಟಿಗಳ ಪೈಕಿ ರೂ.16.96 ಕೋಟಿಗಳನ್ನು ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (BASE) ಸ್ಥಾಪನೆಯ ಸಂಬಂಧ ಪ್ರಾಥಮಿಕ ಆವರ್ತಕ ವೆಚ್ಚಗಳಿಗಾಗಿ ಹಾಗೂ ರೂ.90.00 ಕೋಟಿಗಳನ್ನು ಕಟ್ಟಡ ನಿರ್ಮಾಣ ಮತ್ತು ಇತರೆ ಮೂಲಸೌಕರ್ಯಗಳಿಗಾಗಿ ಉಪಯೋಗಿಸಿಕೊಳ್ಳಲು ಅನುಮತಿ ನೀಡಿ ಆದೇಶಿಸಿದೆ.

ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (BASE) ಸ್ಥಾಪನೆಯ ಸಂಬಂಧದಲ್ಲಿ ಪೂರ್ವಭಾವಿ ಕೆಲಸಗಳನ್ನು ಕೈಗೊಳ್ಳಲು ತಗಲುವ ವೆಚ್ಚಗಳಿಗಾಗಿ 2016-17ನೇ ಸಾಲಿನಲ್ಲಿ ಬಂಡವಾಳ ವೆಚ್ಚದ ಲೆಕ್ಕಶೀರ್ಷಿಕೆ: "4202-01-203-0-01" ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಸವಿವರ ಲೆಕ್ಕಶೀರ್ಷಿಕೆ:422 ಪರಿಶಿಷ್ಟ ಜಾತಿ ಉಪಯೋಜನೆ ಅಡಿಯಲ್ಲಿ ರೂ.74.40 ಕೋಟಿ ಮತ್ತು 423 ಗಿರಿಜನ ಉಪಯೋಜನೆಯಡಿಯಲ್ಲಿ ರೂ.32.56 ಕೋಟಿಗಳು, ಒಟ್ಟು ರೂ.106.96 ಕೋಟಿಗಳ ಅನುದಾನವನ್ನು ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರಿಗೆ ಬಿಡುಗಡೆಗೊಳಿಸಲಾಗಿದೆ.

--3

ಸರ್ಕಾರವು ಬಿಡುಗಡೆ ಮಾಡಿರುವ ಅನುದಾನವನ್ನು ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು ಇವರು ಸ್ವೀಕರ್ತನ ರಶೀದಿಯ ಬಿಲ್ಲನ್ನು ಮೇಲುಸಹಿ ಮಾಡಿ ರಾಜ್ಯ ಹುಜೂರ್ ಖಜಾನೆಗೆ ಸಲ್ಲಿಸಿ ಧನಾದೇಶವನ್ನು ಕಾರ್ಯಕಾರಿ ನಿರ್ದೇಶಕರು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ರವರ ಹೆಸರಿನಲ್ಲಿ ಪಡೆದು ವಿತರಿಸುವುದು.

ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ (BASE) ಪೂರ್ಣ ಪ್ರಮಾಣದ ಸ್ಥಾಪನೆಗಾಗಿ ಅವಶ್ಯಕವಾಗಿರುವ ಮೂಲಸೌಕರ್ಯಗಳ ನಿರ್ಮಾಣಕ್ಕಾಗಿ ಅಂದಾಜಿಸಲಾಗಿರುವ ರೂ.150.00 ಕೋಟಿಗಳ ಪೈಕಿ ರೂ 90.00 ಕೋಟಿಗಳನ್ನು ಮೇಲ್ಕಂಡಂತೆ ಬಿಡುಗಡೆ ಮಾಡಲಾಗಿದ್ದು, ಉಳಿದ 60.00 ಕೋಟಿಗಳನ್ನು (150.00 – 90.00) ಮುಂದಿನ ಆರ್ಥಿಕ ವರ್ಷದ ಆಯವ್ಯಯದಲ್ಲಿ ಅನುದಾನವನ್ನು ಏರ್ಪಾಟು ಮಾಡಿ ಬಿಡುಗಡೆ ಮಾಡಲು ಕ್ರಮಕೈಗೊಳ್ಳಬೇಕು.

ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ (BASE) ಸ್ಥಾಪನೆಗಾಗಿ ರೂ. 150.00 ಕೋಟಿಗಳ ಮೂಲಧನವನ್ನು (Corpus Fund) ನಿಗದಿಪಡಿಸಲಾಗಿದೆ. ಈ ಪೈಕಿ ರೂ 75.00 ಕೋಟಿಗಳ ಹಣವನ್ನು ಮುಂದಿನ 5 ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಸರ್ಕಾರದಿಂದ ಬಿಡುಗಡೆಗೊಳಿಸಲಾಗುವುದು. ಉಳಿದ ಹಣವನ್ನು ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ವಿವಿಧ ಮೂಲಗಳಿಂದ ದೇಣಿಗೆ ಸಂಗ್ರಹಿಸುವ ವ್ಯವಸ್ಥೆಯನ್ನು ರೂಪಿಸುವ ಮೂಲಕ ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯಿಂದ ಹೊಂದಿಸಿಕೊಳ್ಳತಕ್ಕದ್ದು. ಮೂಲಧನದಿಂದ (Corpus Fund) ಒದಗಿ ಬರುವ ಬಡ್ಡಿಯಿಂದ ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ನ ಆವರ್ತಕ ವೆಚ್ಚಗಳನ್ನು ಭರಿಸತಕ್ಕದ್ದು.

2018-19ನೇ ಸಾಲಿನಿಂದ 05 ವರ್ಷಗಳ ಕಾಲಮಿತಿಯೊಳಗೆ ಪ್ರತಿ ವರ್ಷ ರೂ 10.00 ಕೋಟಿಗಳಂತೆ ಆವರ್ತಕ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯು ಪ್ರಾರಂಭಿಸುವ ಕೋರ್ಸುಗಳಲ್ಲಿ ಶೇ.30 ರಷ್ಟು (ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಶೇ.20 ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೇ.10) ಸೀಟುಗಳನ್ನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೀಸಲಿಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ:22 ವೆಚ್ಚ:8 / 2017 ದಿನಾಂಕ: 11.01.2017 ಹಾಗೂ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ: 06 ಟಿಎಫ್‌ಪಿ: 2016 ದಿನಾಂಕ: 27-12-2016ರಲ್ಲಿ ಆಡಳಿತ ಇಲಾಖೆಗೆ ನೀಡಲಾಗಿರುವ ಆರ್ಥಿಕ ಪ್ರತ್ಯಾಯೋಜನೆರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎ.ಅಹಮದ್ ಜಾನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2)

ಇವರಿಗೆ:-

1. ಮಹಾಲೇಖಪಾಲರು (ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.

2. ಮಹಾಲೇಖಪಾಲರು(ಲೆಕ್ಕಪತ್ರ ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು
3. ಸರ್ಕಾರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳಕಟ್ಟಡ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಆಯವ್ಯಯ ಮತ್ತು ಸಂಪನ್ಮೂಲ), ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
12. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
13. ನಿರ್ದೇಶಕರು, ಜನಶಕ್ತಿ ಮತ್ತು ಉದ್ಯೋಗ ವಿಭಾಗ, ಯೋಜನಾ ಇಲಾಖೆ, ಬೆಂಗಳೂರು.
14. ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.
15. ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
16. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ(ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು
17. ಕುಲಸಚಿವರು/ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.
18. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
19. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
20. ಜಿಲ್ಲಾ ಖಜಾನಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು.
21. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
22. ಉಪನಿರ್ದೇಶಕರು, ಖಜಾನೆ ಗಣಕೀಕರಣ ಜಾಲ, ಖನಿಜ ಭವನ, ಬೆಂಗಳೂರು
23. ಎನ್.ಎಂ.ಸಿ./ಎಂ.ಎಂ.ಆರ್. ವಿಷಯ ನಿರ್ವಾಹಕರು, ಶಿಕ್ಷಣ ಇಲಾಖೆ.
24. ರಕ್ಷಣಾ ಕಡತ/ ಹೆಚ್ಚುವರಿ ಪ್ರತಿ.

ಪ್ರತಿ:

1. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
2. ಮಾನ್ಯ ಸಮಾಜಕಲ್ಯಾಣ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ
4. ಸರ್ಕಾರದ ಉಪಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಇವರ ಆಪ್ತ ಸಹಾಯಕರು.
5. ಸರ್ಕಾರದ ಉಪಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ) ಇವರ ಆಪ್ತ ಸಹಾಯಕರು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬೆಂಗಳೂರು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಗೆ 2018-19ನೇ ಸಾಲಿನಲ್ಲಿ ಆರ್ಥಿಕ ಸಹಾಯಾನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016. ದಿನಾಂಕ 16.02.2017
2. ಸರ್ಕಾರದ ಆದೇಶ ಸಂಖ್ಯೆ:ಆಇ 4 ಟಿಎಫ್‌ಪಿ 2018, ದಿನಾಂಕ:24.07.2018
3. ಸರ್ಕಾರದ ಆದೇಶ ಸಂಖ್ಯೆ:ಆಇ 4 ಟಿಎಫ್‌ಪಿ 2018, ದಿನಾಂಕ:29.09.2018.

---

ಪ್ರಸ್ತಾವನೆ:-

ಭಾರತ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಇವರು ಮೂಲತ: ಒಬ್ಬ ಅರ್ಥಶಾಸ್ತ್ರಜ್ಞರಾದ ಕಾರಣ ಅವರ 125ನೇ ಜನ್ಮದಿನಾಚರಣೆಯ ಸ್ಮರಣಾರ್ಥವಾಗಿ ಹಾಗೂ ಅವರ ಉತ್ಕೃಷ್ಟ ಆರ್ಥಿಕ ದೂರದೃಷ್ಟಿ ಹಾಗೂ ಕಲ್ಪನೆಗಳನ್ನು ಸಾಕಾರಗೊಳಿಸುವ ಸದುದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಮೇಲೆ ಓದಲಾದ ಕ್ರಮಸಂಖ್ಯೆ(1)ರ ಆದೇಶದನ್ವಯ ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್(BASE)ನ್ನು ಸ್ಥಾಪಿಸಿ, ಸದರಿ ಸಂಸ್ಥೆಯ ಆರ್ಥಿಕ ಸಂಪನ್ಮೂಲಗಳ ಸೃಜನೆಗೆ ಸಂಬಂಧಿಸಿದಂತೆ ಮೂಲಧನದ (Corpus Fund) ನಿಗದಿಯ ಜೊತೆಗೆ 2018-19ನೇ ಸಾಲಿನಿಂದ 05 ವರ್ಷಗಳ ಕಾಲಮಿತಿಯೊಳಗೆ ಪ್ರತಿ ವರ್ಷ ರೂ 10.00 ಕೋಟಿಗಳಂತೆ ಆವರ್ತಕ ಅನುದಾನವನ್ನು ಬಿಡುಗಡೆಗೊಳಿಸಲು ನಿರ್ದಿಷ್ಟಪಡಿಸಲಾಗಿದೆ.

ತದನುಸಾರ, ಜುಲೈ ಮಾಹೆಯಲ್ಲಿ ಮಂಡಿಸಲಾದ 2018-19ನೇ ಆರ್ಥಿಕ ಸಾಲಿನ ಪೂರ್ಣ ಪ್ರಮಾಣದ ಆಯವ್ಯಯದ ಸವಿವರ ವೆಚ್ಚದ ಅಂದಾಜುಗಳ ಸಂಪುಟ-2 ರ ಅಭಿಯಾಚನೆ ಸಂಖ್ಯೆ:17ರಲ್ಲಿ ಲೆಕ್ಕಶೀರ್ಷಿಕೆ 2202-03-112-0-18ರಡಿ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಗೆ ರೂ. 10.00 ಕೋಟಿಗಳ ಸಹಾಯಾನುದಾನವನ್ನು ನಿಗದಿಗೊಳಿಸಲಾಗಿರುತ್ತದೆ. ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಗೆ 2018-19ನೇ ಸಾಲಿನಲ್ಲಿ ರೂ.10.00 ಕೋಟಿಗಳನ್ನು ಒದಗಿಸುವ ಕ್ರಮವಿಧಿಯು ಮೇಲೆ ಓದಲಾದ ಕ್ರಮಸಂಖ್ಯೆ(2) ಮತ್ತು (3)ರಲ್ಲಿ ಓದಲಾದ ಸರ್ಕಾರದ ಆದೇಶಗಳ ಅನುಬಂಧ-1ಎ ರಲ್ಲಿ ವರ್ಗೀಕೃತಗೊಂಡಿರುತ್ತದೆ. ಆದುದರಿಂದ, ಮೇಲೆ ಕ್ರಮಸಂಖ್ಯೆ(2) ಮತ್ತು (3)ರ ಆದೇಶಗಳಲ್ಲಿ ನಿರ್ದಿಷ್ಟಪಡಿಸಲಾದ ಕ್ರಮವಿಧಾನವನ್ನು ಅನುಸರಿಸಿದ ತರುವಾಯ ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ ಸಂಸ್ಥೆಗೆ 2018-19ನೇ ಸಾಲಿನಲ್ಲಿ ನಿಗದಿಪಡಿಸಲಾದ ರೂ 10.00 ಕೋಟಿಗಳ ಸಹಾಯಾನುದಾನದ ಪೈಕಿ ರೂ 5.00 ಕೋಟಿಗಳನ್ನು ಬಿಡುಗಡೆ ಮಾಡುವ ಸಂಬಂಧ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 35 ಯುಬಿವಿ 2018, ಬೆಂಗಳೂರು ದಿನಾಂಕ: 01.01.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ, 2018-19ನೇ ಆರ್ಥಿಕ ಸಾಲಿಗೆ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಗೆ ಲೆಕ್ಕ ಶೀರ್ಷಿಕೆ: 2202-03-112-0-18-103 ರಡಿಯಲ್ಲಿ ನಿಗದಿಪಡಿಸಿರುವ ರೂ.1000.00 ಲಕ್ಷಗಳ ಆರ್ಥಿಕ ಸಹಾಯಾನುದಾನದಲ್ಲಿ ರೂ.500.00 ಲಕ್ಷಗಳನ್ನು (ಐನೂರು ಲಕ್ಷ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಈ ಅನುದಾನಕ್ಕೆ ತತ್ಸಂಬಂಧಿತ ಜಿಎಎ ಬಿಲ್ಲುಗಳಿಗೆ ಮೇಲು ರುಜು ಮಾಡಲು ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರನ್ನು ಅಧಿಕೃತಗೊಳಿಸಲಾಗಿದೆ. ಸದರಿ ಸಹಾಯಾನುದಾನದ ತ್ರೈಮಾಸಿಕ ಬಿಲ್ಲನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 02 ಎಫ್‌ಆರ್‌ಸಿ 2003, ದಿನಾಂಕ: 27-12-2004ರಲ್ಲಿನ ಸೂಚನೆಗಳಂತೆ ಅನುದಾನದ ಬಿಲ್ಲುಗಳನ್ನು ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರ್

--2

ಖಜಾನಾಧಿಕಾರಿಗಳು, ಬೆಂಗಳೂರು, ಇವರಿಗೆ ಕಳುಹಿಸಿ ಚೆಕ್‌ನ್ನು ಪಡೆದು ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಕಳುಹಿಸತಕ್ಕದ್ದು.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2202-03-112-0-18-101 ಸಹಾಯಾನುದಾನ-ಸಾಮಾನ್ಯ ರಡಿಯಲ್ಲಿ ಭರಿಸತಕ್ಕದ್ದು. ಇದನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು.

[illegible] ರೂ.500.00 ಲಕ್ಷಗಳ ಅನುದಾನದ ಬಿಡುಗಡೆಗೆ, ಈ ಆದೇಶದನ್ವಯ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ವಿನಿಯೋಗಿಸಿಕೊಂಡ ಬಗ್ಗೆ ವೆಚ್ಚ ನಿರೂಪಣಾ ಪಟ್ಟಿಯೊಂದಿಗೆ ಹಣ ಬಳಕೆ ಪ್ರಮಾಣಪತ್ರ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 4 ಟಿಎಫ್‌ಪಿ 2018, ದಿನಾಂಕ:29.09.2018ರನ್ವಯ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 1088 ವೆಚ್ಚ-8/2018, ದಿನಾಂಕ:16.11.2018ರಲ್ಲಿ ನೀಡಲಾದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಕೆ.ಎಲ್.ಸುಬ್ರಮಣ್ಯ)
ಸರ್ಕಾರದ ಉಪ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು)
30/01/2019

ಇವರಿಗೆ:-

1. ಮಹಾಲೇಖಪಾಲರು (ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು(ಲೆಕ್ಕಪತ್ರ ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
5. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ಬಿ&ಆರ್), ವಿಧಾನಸೌಧ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ನಿರ್ದೇಶಕರು, ಬೆಂಗಳೂರು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್, ರಾಜಾಜಿ ಹಾಲ್, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು.
9. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು
10. ಶ್ರೀ ಎಂ.ಡಿ.ದ್ಯಾಬೇರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬೆಂಗಳೂರು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್, ರಾಜಾಜಿ ಹಾಲ್, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು.
11. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
12. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-8, ವಿಧಾನಸೌಧ, ಬೆಂಗಳೂರು.
14. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
15. ಜಿಲ್ಲಾ ಖಜಾನಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು.
16. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ.
17. ಎನ್.ಐ.ಸಿ./ಎಂ.ಎಂ.ಆರ್. ವಿಷಯ ನಿರ್ವಾಹಕರು, ಶಿಕ್ಷಣ ಇಲಾಖೆ
18. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿಗಳು:

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಉಪಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು/ ಕಾಲೇಜು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಮೂಲಸೌಕರ್ಯ ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016, ದಿ:16.02.2017
2) ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಪತ್ರಸಂಖ್ಯೆ:ಕಗೃಮಂ/ಮು.ಅ./ಬೇಸ್/231/2017-18/1314, ದಿ:16.10.2017
3) ಸರ್ಕಾರದ ಆದೇಶ ಸಂಖ್ಯೆ:ಇಡಿ 466 ಯುಬಿವಿ 2017, ದಿ:25.10.2017
4)ಸರ್ಕಾರದ ಪತ್ರಸಂಖ್ಯೆ:ಇಡಿ 466 ಯುಬಿವಿ 2017, ದಿನಾಂಕ:04.01.2018
5) ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಪತ್ರಸಂಖ್ಯೆ:ಕಗೃಮಂ/ಮು.ಅ./ಬೇಸ್/231/2017-18/2009, ದಿ:10.01.2018

**ಪ್ರಸ್ತಾವನೆ:**

ಭಾರತ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಇವರ 125ನೇ ಜನ್ಮದಿನಾಚರಣೆಯ ಸ್ಮರಣಾರ್ಥವಾಗಿ **ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (BASE)**ನ್ನು ಮೇಲೆ ಓದಲಾದ ಕ್ರಮಸಂಖ್ಯೆ(1)ರಲ್ಲಿನ ಆದೇಶದನ್ವಯ ಸ್ವತಂತ್ರ ಸ್ವಾಯತ್ತ ಶೈಕ್ಷಣಿಕ ಸಂಸ್ಥೆಯನ್ನಾಗಿ ಸ್ಥಾಪಿಸಿ 2017-18ನೇ ಸಾಲಿನಿಂದ ಕಾರ್ಯಾರಂಭಗೊಳಿಸಲಾಗಿದೆ.

ಮುಂದುವರೆದು, ಉನ್ನತ ಶಿಕ್ಷಣ ಇಲಾಖೆಗೆ ಅನುಸೂಚಿತ ಜಾತಿಗಳ ಉಪಯೋಜನೆ ಹಾಗೂ ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಮಂಜೂರಾಗಿ ಬಳಕೆಯಾಗದೇ ಇರುವ ಮೊತ್ತದ ಬಂಡವಾಳ ಲೆಕ್ಕಶೀರ್ಷಿಕೆಯಡಿಯಲ್ಲಿನ ಅನುದಾನ ರೂ.106.96 ಕೋಟಿಗಳನ್ನು ಬಿಡುಗಡೆ ಮಾಡಿ ಈ ಪೈಕಿ ರೂ.16.96 ಕೋಟಿಗಳನ್ನು ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (BASE) ಸ್ಥಾಪನೆಯ ಸಂಬಂಧ ಪ್ರಾಥಮಿಕ ಆವರ್ತಕ ವೆಚ್ಚಗಳಿಗಾಗಿ ಹಾಗೂ ರೂ.90.00 ಕೋಟಿಗಳನ್ನು ಕಟ್ಟಡ ನಿರ್ಮಾಣ ಮತ್ತು ಇತರೆ ಮೂಲಸೌಕರ್ಯಗಳಿಗಾಗಿ ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿತ್ತು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣದಲ್ಲಿ ಲೀಸ್ ಆಧಾರದ ಮೇಲೆ ಮಂಜೂರು ಮಾಡಲಾದ ಒಟ್ಟು 43.35 ಎಕರೆ ಜಮೀನಿನಲ್ಲಿ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳನ್ನು ರೂ.150.00 ಕೋಟಿಗಳ ವೆಚ್ಚದಲ್ಲಿ ಕಲ್ಪಿಸಲು ಉದ್ದೇಶಿಸಿ ಈ ಸಂಬಂಧ ನಿರ್ಮಾಣ ಕಾಮಗಾರಿಗಳ ನಿರ್ವಹಣೆಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಲಾಗಿತ್ತು.

ತದನುಸಾರ, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ಗುತ್ತಿಗೆ ನೀಡಲು ಕರ್ನಾಟಕ ಗೃಹ ಮಂಡಳಿಯಿಂದ ಜರುಗಿಸಲಾದ ರೂ. 149,23,74,566.00 ಮೊತ್ತದ ಟೆಂಡರ್ ಪ್ರಕ್ರಿಯೆಯ ತಾಂತ್ರಿಕ ಹಾಗೂ ಆರ್ಥಿಕ ಬಿಡ್ಡುಗಳಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರ ಪೈಕಿ ಅತೀ ಕಡಿಮೆ ದರ ಪ್ರಸ್ತಾಪಿಸಿ ಯಶಸ್ವಿ ಎಲ್-1 ಬಿಡ್ಡುದಾರರಾಗಿ M/s B.G.Shirke Construction Technology Pvt. Ltd ಸಂಸ್ಥೆಯು ಆಯ್ಕೆಯಾಗಿರುತ್ತದೆ. ಆದರೆ ಸದರಿ ಏಜೆನ್ಸಿಯು ಕೋಟ್ ಮಾಡಿದ ದರ ರೂ. 195, 29, 31, 677.00 ಟೆಂಡರ್‌ಗಿಟ್ಟ ಮೊತ್ತ

--2

ರೂ.149,23,74,566.00 (2016-17ನೇ ಸಾಲಿನ ದರ ಅನುಸೂಚಿ ಆಧಾರದ ಮೇಲೆ ತಯಾರಿಸಲಾದ ಅಂದಾಜುಗಳನುಸಾರ) ಗಳಿಗಿಂತ ಶೇ.30.86(+)ರಷ್ಟು ಅಧಿಕವಾದ ಹಿನ್ನಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯ ತಾಂತ್ರಿಕ ಪರಾಮರ್ಶನ ಸಮಿತಿಯಿಂದ ಸಂಧಾನ ನಡೆಸಲಾಗಿದೆ.

ಮೊದಲ ಸಂಧಾನದಲ್ಲಿ ದರ ಪ್ರಸ್ತಾಪವನ್ನು ರೂ 195,29,31,677.00 ಗಳಿಂದ ರೂ. 194,31,67,017.00 (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ)ಗಳಿಗೆ ಕಡಿಮೆ ಮಾಡಲು ಎಲ್-1 ಬಿಡ್ಡುದಾರು ಒಪ್ಪಿರುತ್ತಾರೆ. ದರ ಇಳಿಕೆ ತರುವಾಯದಲ್ಲೂ ಸಹ ಕಡಿಮೆ ದರ ಪ್ರಸ್ತಾಪವು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದ್ದರಿಂದ ಪುನ: ಎಲ್-1 ಬಿಡ್ಡುದಾರರೊಂದಿಗೆ ಕರ್ನಾಟಕ ಗೃಹಮಂಡಳಿಯಿಂದ ಸಂಧಾನ ನಡೆಸಲಾಗಿದೆ. ಅಂತಿಮವಾಗಿ ದರ ಪ್ರಸ್ತಾಪವನ್ನು ರೂ 195,29,31,677.00(ಮೂಲ ಪ್ರಸ್ತಾಪಿತ ದರ- ಶೇ.12 ಜಿಎಸ್‌ಟಿ ಸೇರಿದಂತೆ) ಗಳಿಂದ ರೂ. **167,89,98,134.00 (ಜಿಎಸ್‌ಟಿ ಹೊರತುಪಡಿಸಿ)** ಗಳಿಗೆ ಕಡಿಮೆ ಮಾಡಲು ಎಲ್-1 ಬಿಡ್ಡುದಾರರು ಸಮ್ಮತಿಸಿರುತ್ತಾರೆ. ಈ ಅಂತಿಮ ದರ ಪ್ರಸ್ತಾಪವು ಟೆಂಡರ್‌ಗಿಟ್ಟ ಮೊತ್ತ ರೂ.149,23,74,566.00(2016-17ನೇ ಸಾಲಿನ ದರ ಅನುಸೂಚಿಯನುಸಾರ ಅದ್ಯತನಗೊಳಿಸಲಾದ ಸಮಗ್ರ ಯೋಜನಾ ವರದಿ ಪ್ರಕಾರ) ಗಳಿಗಿಂತ ಶೇ. 12.50ರಷ್ಟು ಹೆಚ್ಚಾಗಿರುತ್ತದೆ.

ತತ್ಪರಿಣಾಮವಾಗಿ, ಮೇಲೆ ಓದಲಾದ ಕ್ರಮಸಂಖ್ಯೆ:(2)ರ ಪತ್ರದನ್ವಯ ಕರ್ನಾಟಕ ಗೃಹ ಮಂಡಳಿಯಿಂದ ಅನುಮೋದನೆಗಾಗಿ ಕಳುಹಿಸಲಾದ ಟೆಂಡರ್ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಎಲ್-1 ಬಿಡ್ಡುದಾರರು ಸಲ್ಲಿಸದ ಅಂತಿಮ ದರ ಪ್ರಸ್ತಾಪದಲ್ಲಿ ಇನ್ನೂ ಗಣನೀಯ ಹೆಚ್ಚಳ ಇರುವುದನ್ನು ಯಥೋಚಿತವಾಗಿ ಅವಲೋಕಿಸಿದ ತರುವಾಯ ಎಲ್-1 ಬಿಡ್ಡುದಾರರೊಂದಿಗೆ ಮರು-ಸಂಧಾನ ನಡೆಸುವ ಅವಶ್ಯಕತೆಯನ್ನು ಮನಗಂಡು ಮೇಲೆ ಕ್ರಮಸಂಖ್ಯೆ(3)ರಲ್ಲಿ ಓದಲಾದ ಆದೇಶದನ್ವಯ ಮರು ಸಂಧಾನ ಸಮಿತಿಯನ್ನು ರಚಿಸಲಾಗಿತ್ತು. ತದನುಸಾರ ನಡೆಸಲಾದ ಮರುಸಂಧಾನದ ನಂತರ ರೂ. **1,70,13,94,076/- (ಜಿಎಸ್‌ಟಿ ಸೇರಿದಂತೆ ಎಲ್ಲಾ ಅನ್ವಯಿಕ ತೆರಿಗೆಗಳನ್ನು ಒಳಗೊಂಡು)** ಗಳ ದರ ಪ್ರಸ್ತಾಪಕ್ಕೆ ಒಮ್ಮತಕ್ಕೆ ಬರಲಾಗಿದೆ. ತರುವಾಯದಲ್ಲಿ ಟೆಂಡರ್ ಪ್ರೀಮಿಯಂ ದರವನ್ನು ಕಡಿಮೆಗೊಳಿಸುವ ಬಗ್ಗೆ ಪರಿಗಣಿಸುವಂತೆ ಮೇಲೆ ಕ್ರಮಸಂಖ್ಯೆ(4)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಕರ್ನಾಟಕ ಗೃಹ ಮಂಡಳಿಗೆ ನಿರ್ದೇಶನ ನೀಡಲಾಗಿತ್ತು.

ತದನುಸಾರ, M/s B.G.Shirke Construction Technology Pvt. Ltd ಸಂಸ್ಥೆಯೊಂದಿಗೆ ಕರ್ನಾಟಕ ಗೃಹ ಮಂಡಳಿಯಿಂದ ನಡೆಸಿದ ಮರುಸಂಧಾನದಲ್ಲಿ, 14% ದರದಲ್ಲಿ ಈ ಹಿಂದೆ ಕಲ್ಪಿಸಲಾಗಿದ್ದ ಟೆಂಡರ್ ಪ್ರೀಮಿಯಂ ಅನ್ನು 11.9% ಕ್ಕೆ ಕಡಿಮೆ ಮಾಡಿ ಅಂತಿಮವಾಗಿ **166,99,51,876/- (ಜಿಎಸ್‌ಟಿ ಸೇರಿದಂತೆ ಎಲ್ಲಾ ಅನ್ವಯಿಕ ತೆರಿಗೆಗಳನ್ನು ಒಳಗೊಂಡು)** ಗಳ ದರ ಪ್ರಸ್ತಾಪಕ್ಕೆ ಒಮ್ಮತಕ್ಕೆ ಬರಲಾಗಿದೆ. ಅದರಂತೆ 11.9% ಟೆಂಡರ್ ಪ್ರೀಮಿಯಂಕ್ಕನುಗುಣವಾಗಿ ಕರ್ನಾಟಕ ಗೃಹ ಮಂಡಳಿಯಿಂದ ಒಟ್ಟಾರೆ ಯೋಜನಾ ವೆಚ್ಚವನ್ನು ರೂ.182.00 ಕೋಟಿಗಳಿಗೆ ಸೀಮಿತಗೊಳಿಸಲಾಗಿದೆ. ಯಶಸ್ವಿ ಅಂತಿಮ ಮರುಸಂಧಾನದಲ್ಲಿ M/s B.G.Shirke Construction Technology Pvt. Ltd ಸಂಸ್ಥೆಯು ಒಪ್ಪಿದ ಮೊತ್ತ ರೂ. 166,99,51,876.00 ಪರಿಷ್ಕೃತ ಒಟ್ಟಾರೆ ಯೋಜನಾ ವೆಚ್ಚ ರೂ. 182.00 ಕೋಟಿಗಳಿಗಿಂತ ರೂ. 15,00,48,124.00 ಗಳಷ್ಟು ಕಡಿಮೆಯಾಗಿರುತ್ತದೆ.

ತತ್ಪರಿಣಾಮವಾಗಿ, ಮೇಲೆ ಕ್ರಮಸಂಖ್ಯೆ(5)ರಲ್ಲಿ ಓದಲಾದ ಪತ್ರದಲ್ಲಿ ರೂ. 166,99,51,876.00 ಮೊತ್ತದ ಟೆಂಡರ್ ಅಂತಿಮಗೊಳಿಸಲು ಸರ್ಕಾರದ ಒಪ್ಪಿಗೆ ಹಾಗೂ ರೂ. 182.00 ಕೋಟಿಗಳ ವೆಚ್ಚದ ಈ ಕೆಳಕಂಡ ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಸಮಗ್ರ ಯೋಜನಾ ವರದಿಯೊಂದಿಗೆ ಆಯುಕ್ತರು, ಕರ್ನಾಟಕ ಗೃಹ ಮಂಡಳಿ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| Sl.No. | Description of Work | Amount in INR |
|---|---|---|
| 1. | Academic Block | 15,21,47,727.00 |

| | | |
|---|---|---|
| 2. | Faculty Block | 13,92,65,909.00 |
| 3. | Library & Student Centre- | 19,01,61,926.00 |
| 4. | Auditorium | 11,60,18,565.00 |
| 5. | Admin Block | 5,81,27,524.00 |
| 6. | Girl's Hostel | 9,11,68,868.00 |
| 7. | Boy's Hostel with dining | 11,30,61,988.00 |
| 8. | Guest House | 8,51,37,010.00 |
| 9. | Residence Building | 1,98,98,072.00 |
| 10. | 2.5 bhk - Apartments | 8,65,74,547.00 |
| 11. | 1 bhk - Apartments | 4,59,53,808.00 |
| 12. | Entrance plaza, bridge and compound wall works | 4,71,34,447.00 |
| 13. | External development works | 16,60,10,730.00 |
| 14. | Landscaping works - roads, bridges, pavers - hardscape items | 18,17,13,444.00 |
| 15. | **Sub total – I(Amount put to tender)** | **149,23,74,566.00** |
| 16. | Tender Premium at 11.9% | 17,75,77,310.00 |
| 17. | **Sub total – II** | **166,99,51,876.00** |
| 18. | AEF fees at 2.75 + tax on Sl.No.17 | 5,42,73,435.00 |
| 19. | KHB and PMC charges at 5% on Sl.No.17 | 8,34,97,593.00 |
| 20. | Electrical deposits, Supervision charges, Electrical Inspectorate charges and Shifting of lines | 1,05,96,084.00 |
| 21. | Miscellaneous and rounding | 16,81,010.00 |
| 22. | **Project Cost in Rs.** | **182,00,00,000.00** |

---4

ಯಾವುದೇ ಕಾಮಗಾರಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಬೇಕಾದಲ್ಲಿ ಸದರಿ ಕಾಮಗಾರಿಯ ಮೂಲ ಅಂದಾಜಿನ ಶೇಕಡಾ 30ಕ್ಕಿಂತ ಕಡಿಮೆ ಇರದಷ್ಟು ಅನುದಾನವನ್ನು ಆಯವ್ಯಯದಲ್ಲಿ ಕಾಯ್ದಿರಿಸಬೇಕಾಗುತ್ತದೆ. ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿರುವ ರೂ.106.96 ಕೋಟಿಗಳ ಪೈಕಿ ಮೂಲಸೌಕರ್ಯ ಕಲ್ಪಿಸುವ ಉದ್ದೇಶಕ್ಕಾಗಿ ರೂ.90.00 ಕೋಟಿಗಳನ್ನು ಅಂದರೆ ಒಟ್ಟಾರೆ ಯೋಜನಾ ವೆಚ್ಚದ ಶೇ.30 ಕ್ಕಿಂತ ಹೆಚ್ಚಿನ ಅನುದಾನವನ್ನು 2017-18ನೇ ಆರ್ಥಿಕ ಸಾಲಿನಲ್ಲಿ ಕಾಯ್ದಿರಿಸಲಾಗಿದೆ. ಮುಂದುವರೆದು, ಕರ್ನಾಟಕ ಗೃಹ ಮಂಡಳಿಯ ಆದೇಶ ಸಂಖ್ಯೆ:KHB/CE/B.U./BASE/2017-18, ದಿನಾಂಕ:11.08.2017 ರಂದು ಪ್ರಸ್ತಾಪಿತ ಕಾಮಗಾರಿಗಳಿಗೆ ತಾಂತ್ರಿಕ ಅನುಮೋದನೆ ನೀಡಲಾಗಿದೆ.

ಮೂಲತಃ ಒಬ್ಬ ಅರ್ಥಶಾಸ್ತ್ರಜ್ಞರಾದ ಡಾ: ಬಿ.ಆರ್.ಅಂಬೇಡ್ಕರ್ ಇವರ ಆರ್ಥಿಕ ದೂರದೃಷ್ಟಿ ಹಾಗೂ ಪರಿಕಲ್ಪನೆಗಳನ್ನು ಸಾಕಾರಗೊಳಿಸಲು, ಖ್ಯಾತ ಆರ್ಥಿಕ ತಜ್ಞರನ್ನು, ಶೈಕ್ಷಣಿಕ ಮತ್ತು ಸಾಂಸ್ಥಿಕ ಸ್ವಾಯತ್ತತೆ ಹಾಗೂ ಸ್ವಾವಲಂಬಿತನ ರೂಪಿಸಲು ಅನುವಾಗುವ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವ ಸಲುವಾಗಿ ಸ್ಥಾಪಿಸಲಾಗಿರುವ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯಲ್ಲಿ ಅರ್ಥಶಾಸ್ತ್ರ ವಿಷಯದ ಮೊದಲ ವರ್ಷದ ಬಿ.ಎ.(ಹಾನರ್ಸ್) ಕೋರ್ಸನ್ನು ಈಗಾಗಲೇ ಪ್ರಾರಂಭಿಸಲಾಗಿರುವ ಹಿನ್ನಲೆಯಲ್ಲಿ ಕಟ್ಟಡ ಮತ್ತು ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸಬೇಕಾಗಿರುವ ಕಾರಣ ಪ್ರಸಕ್ತ ಪ್ರಸ್ತಾವನೆಯು ಯುಕ್ತ ಹಾಗೂ ಅತ್ಯಂತ ಸಮರ್ಥನೀಯವಾಗಿರುವುದನ್ನು ಪರಿಗಣಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಇಡಿ 466 ಯುಬಿವಿ 2017, ಬೆಂಗಳೂರು, ದಿ:30.01.2018</u>**

ಪೂರ್ವ ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೊದಲ ಹಂತದ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ಅಂದಾಜು ರೂ 182.00 ಕೋಟಿಗಳಿಗೆ (ಒಂದು ನೂರ ಎಂಭತ್ತೆರಡು ಕೋಟಿ ರೂಪಾಯಿಗಳು) ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಮುಂದುವರೆದು ರೂ. 166,99,51,876/- ಗಳ (ಒಂದು ನೂರ ಅರವತ್ತಾರು ಕೋಟಿ ತೊಂಭತ್ತೊಂಭತ್ತು ಲಕ್ಷ ಐವತ್ತೊಂದು ಸಾವಿರದ ಎಂಟು ನೂರ ಎಪ್ಪತ್ತಾರು ರೂಪಾಯಿಗಳು ಮಾತ್ರ) ಮೊತ್ತಕ್ಕೆ M/s B.G.Shirke Construction Technology Pvt. Ltd ಇವರಿಗೆ ಟೆಂಡರ್ ಕಾರ್ಯಾದೇಶ ನೀಡಲು ಅನುಮತಿಸಲಾಗಿದೆ.

ಸರ್ಕಾರದಿಂದ ನೀಡಲಾಗಿರುವ ಆಡಳಿತಾತ್ಮಕ ಅನುಮೋದನೆಯು ಈ ಕೆಳಕಂಡ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟಿರುತ್ತದೆ.

1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರಡಿ ರಚಿಸಲಾದ ನಿಯಮಗಳಲ್ಲಿ ಗೊತ್ತುಪಡಿಸಲಾಗಿರುವ ಉಪಬಂಧಗಳನ್ನು ಹಾಗೂ ಲೋಕೋಪಯೋಗಿ ಇಲಾಖೆಯ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ಕಾಮಗಾರಿಗಳನ್ನು ಅತ್ಯಂತ ಪಾರದರ್ಶಕವಾಗಿ ನಿರ್ವಹಿಸತಕ್ಕದ್ದು.

---5

2) ಕಟ್ಟಡದ ಗುಣಮಟ್ಟವನ್ನು ಪರಿಶೀಲಿಸಲು 3ನೇ ವ್ಯಕ್ತಿ ಅಥವಾ ಪರಿವೀಕ್ಷಣಾ ತಪಾಸಣೆ ನಡೆಸತಕ್ಕದ್ದು.
3) ಪ್ರಸ್ತಾಪಿತ ಕಟ್ಟಡ ಕಾಮಗಾರಿಗಳನ್ನು 2 ವರ್ಷಗಳೊಳಗಾಗಿ ಪೂರ್ಣಗೊಳಿಸಲು ಕ್ರಮವಹಿಸತಕ್ಕದ್ದು.
4) ಉನ್ನತ ಶಿಕ್ಷಣ ಇಲಾಖೆಯು ಕಾಲಕಾಲಕ್ಕೆ ಕಟ್ಟಡ ನಿರ್ಮಾಣ ಕಾಮಗಾರಿಗಳ ಬಗ್ಗೆ ಪರಿಶೀಲನೆ ಅಥವಾ ಪರಿವೀಕ್ಷಣೆ ನಡೆಸುವ ಅಧಿಕಾರ ಹೊಂದಿರುತ್ತದೆ.
5) ಕಾಮಗಾರಿಗಳ ಪ್ರಗತಿಯ ಕುರಿತು ವರದಿಯನ್ನು ಪ್ರತಿ ಮಾಹೆಯ ಅಂತ್ಯದಲ್ಲಿ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಗೆ ಸಲ್ಲಿಸತಕ್ಕದ್ದು.
6) ಅಂದಾಜುಗಳ ಅಥವಾ ಯೋಜನಾ ವೆಚ್ಚದ ಮೇಲ್ಮುಖ ಪರಿಷ್ಕರಣೆಗೆ ಯಾವುದೇ ಪ್ರಸ್ತಾವನೆ ಸಲ್ಲಿಸತಕ್ಕದ್ದಲ್ಲ.

ಈ ಆದೇಶದನ್ವಯ ನೀಡಲಾಗಿರುವ ಆಡಳಿತ ಅನುಮೋದನೆಯನ್ನು ಹೆಚ್ಚಿನ ಅನುದಾನ ಬಿಡುಗಡೆಗೆ ಮಂಜೂರಾತಿ ಎಂದು ಪರಿಭಾವಿಸತಕ್ಕದ್ದಲ್ಲ ಅಥವಾ ಅರ್ಥೈಸಿಕೊಳ್ಳತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

25/01/18
(ಎಂ.ಎ.ಅಹಮದ್ ಜಾನ್)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2)

30/1/18

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ/ಆಡಿಟ್), ಕರ್ನಾಟಕ, ಬೆಂಗಳೂರು-560 001
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4) ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಅರಮನೆ ರಸ್ತೆ, ಬೆಂಗಳೂರು.
5) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು
6) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ(ಸಚಿವ ಸಂಪುಟ ಶಾಖೆ), ವಿಧಾನಸೌಧ, ಬೆಂಗಳೂರು(ಸಚಿವ ಸಂಪುಟದ ಪ್ರಕರಣ ಸಂಖ್ಯೆ:ಸಿ.55/2018, ದಿನಾಂಕ:17.01.2018ರ ಮೇರೆಗೆ)
7) ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು.
8) ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
9) ನಿರ್ದೇಶಕರು, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್, ಡಿ.ದೇವರಾಜು ಅರಸ್ ರಸ್ತೆ, ರೇಸ್ ಕೋರ್ಸ್ ಎದುರು, ಬೆಂಗಳೂರು-560 001
10) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್, ಡಿ.ದೇವರಾಜು ಅರಸ್ ರಸ್ತೆ, ರೇಸ್ ಕೋರ್ಸ್ ಎದುರು, ಬೆಂಗಳೂರು-560 001.

--6

(3)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಯದ ಮೂಲ ಸೌಕರ್ಯದ ನಿರ್ಮಾಣ ಕಾಮಗಾರಿಗಳ ಪರಿಷ್ಕೃತ ಅಂದಾಜುಗಳಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ

ಓದಲಾಗಿದೆ

1) ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016, ದಿ:16.02.2017

2) ಸರ್ಕಾರದ ಆದೇಶ ಸಂಖ್ಯೆ: ಇಡಿ 466 ಯುಬಿವಿ 2017, ದಿ:30.01.2018

3) ಕುಲಸಚಿವರು, ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಎಕನಾಮಿಕ್ಸ್ ವಿಶ್ವವಿದ್ಯಾಲಯ ಇವರ ಪತ್ರಸಂಖ್ಯೆ: BASE/ FIN/ 023 /2019 /T237, ದಿನಾಂಕ:25.02.2021

4) ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಗೃಮಂ/ ಮುಅ/ ಬೇಸ್/ 408/ 2020-21, ದಿನಾಂಕ:09.03.2021

23/2/2021

********

**ಪ್ರಸ್ತಾವನೆ:**

ಭಾರತ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಇವರ 125ನೇ ಜನ್ಮದಿನಾಚರಣೆಯ ಸ್ಮರಣಾರ್ಥ ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಅನ್ನು ಸ್ವತಂತ್ರ ಸ್ವಾಯತ್ತ ಶೈಕ್ಷಣಿಕ ಸಂಸ್ಥೆಯನ್ನಾಗಿ ಮೇಲೆ ಓದಲಾದ ಕ್ರಮಸಂಖ್ಯೆ(1)ರ ಆದೇಶದನ್ವಯ, ಸ್ಥಾಪಿಸಿ 2017-18ನೇ ಸಾಲಿನಿಂದ ಕಾರ್ಯಾರಂಭಗೊಳಿಸಲಾದೆ. ಮುಂದುವರೆದು, ಸದರಿ ಅರ್ಥಶಾಸ್ತ್ರ ವಿದ್ಯಾಲಯವನ್ನು ಬೆಂಗಳೂರು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ ಅಧಿನಿಯಮ, 2019(2019ರ ಕರ್ನಾಟಕ ಅಧಿನಿಯಮ ಸಂಖ್ಯೆ:20)ನ್ನು ಜಾರಿಗೆ ತರುವ ಮೂಲಕ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವನ್ನಾಗಿ ಉನ್ನತೀಕರಿಸಲಾಗಿದೆ.

--2

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣದಲ್ಲಿ ಲೀಸ್ ಆಧಾರದ ಮೇಲೆ ಮಂಜೂರು ಮಾಡಲಾದ ಒಟ್ಟು 43.35 ಎಕರೆ ಜಮೀನಿನಲ್ಲಿ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಯೋಜಿಸಲಾದ ಮೊದಲ ಹಂತದ ಕಾಮಗಾರಿಗಳ ಅಂದಾಜು ರೂ 182.00 ಕೋಟಿಗಳಿಗೆ (ಒಂದು ನೂರ ಎಂಭತ್ತೆರಡು ಕೋಟಿ ರೂಪಾಯಿಗಳು) ಮೇಲೆ ಕ್ರಮಸಂಖ್ಯೆ(2)ರಲ್ಲಿ ಓದಲಾದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ, ರೂ. 166,99,51,876/- ಗಳ (ಒಂದು ನೂರ ಅರವತ್ತಾರು ಕೋಟಿ ತೊಂಭತ್ತೊಂಭತ್ತು ಲಕ್ಷ ಐವತ್ತೊಂದು ಸಾವಿರದ ಎಂಟು ನೂರ ಎಪ್ಪತ್ತಾರು ರೂಪಾಯಿಗಳು ಮಾತ್ರ) ಮೊತ್ತಕ್ಕೆ M/s B.G.Shirke Construction Technology Pvt.Ltd. ಇವರಿಗೆ ಟೆಂಡರ್ ಕಾರ್ಯಾದೇಶ ನೀಡಲು ಅನುಮತಿಸಲಾಗಿದೆ.

ದಿನಾಂಕ:14.04.2021 ರಂದು ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಯವನ್ನು ವಿದ್ಯುಕ್ತವಾಗಿ ಉದ್ಘಾಟಿಸಲು ಪ್ರಸ್ತಾಪಿಸಲಾಗಿರುವ ಹಿನ್ನೆಲೆಯಲ್ಲಿ, ಡಾ:ಬಿ.ಆರ್. ಅಂಬೇಡ್ಕರ್ ಇವರ ಪ್ರತಿಮೆ ಪ್ರತಿಷ್ಠಾಪನೆ ಸೇರಿದಂತೆ ಯೋಜಿಸಲಾದ ಹೆಚ್ಚುವರಿ ಕಾಮಗಾರಿಗಳ ನಿರ್ವಹಣಾ ವೆಚ್ಚವನ್ನು ವಿಶ್ವವಿದ್ಯಾಲಯದ ಆಡಳಿತಾತ್ಮಕ ವೆಚ್ಚಗಳ ಬಾಬ್ತಿನಲ್ಲಿರುವ 9.00 ಕೋಟಿಗಳಿಂದ ಭರಿಸುವ ಬಗ್ಗೆ ಸರ್ಕಾರದ ಅನುಮತಿಯನ್ನು ಕುಲಸಚಿವರು, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಯ ಇವರು ಮೇಲೆ ಕ್ರಮಸಂಖ್ಯೆ:(3)ರ ಪತ್ರದಲ್ಲಿ ಕೋರಿರುತ್ತಾರೆ.

ಪ್ರಸ್ತುತ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಯದಿಂದ ಯೋಜಿಸಲಾಗಿರುವ ಹೆಚ್ಚುವರಿ ಕಾಮಗಾರಿಗಳ ನಿರ್ವಹಣೆಗಾಗಿ ಹಾಗೂ ಮೂಲ ಅಂದಾಜುಗಳಲ್ಲಿ ಒಳಗೊಂಡಿದ್ದ ಕೆಲವು ಕಾಮಗಾರಿ ಘಟಕಗಳ ದರ ವ್ಯತ್ಯಯದಿಂದಾಗಿ ಮೂಲ ಅಂದಾಜನ್ನು ಪರಿಷ್ಕರಿಸುವುದು ಅಗತ್ಯವಾದ ಮೇರೆಗೆ, ಘಟಕವಾರು ಅಂದಾಜು ನಿರೂಪಣಾ ಪಟ್ಟಿ ಹಾಗೂ ಯೋಜನಾ ನಕ್ಷೆಗಳೊಂದಿಗೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ ಇವರು ಮೇಲೆ ಓದಲಾದ ಕ್ರಮಸಂಖ್ಯೆ(4)ರ ಪತ್ರದನ್ವಯ ಪರಿಷ್ಕೃತ ಅಂದಾಜುಗಳನ್ನು ಸರ್ಕಾರದ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೂಲ ಅಂದಾಜುಗಳ ಗುತ್ತಿಗೆ ಕರಾರುಗಳನ್ನೊಳಗೊಂಡ ಟೆಂಡರ್ ದಾಖಲೆ KW4 ನ ಖಂಡ 34 ರನ್ವಯ, ಮೂಲ ಅಂದಾಜಿನಲ್ಲಿಲ್ಲದ ಕಾಮಗಾರಿಗಳನ್ನು ಹೆಚ್ಚುವರಿಯಾಗಿ ಮೂಲ ಗುತ್ತಿಗೆದಾರರಿಗೆ ವಹಿಸಲು

--3

ಅವಕಾಶವಿರುತ್ತದೆ. ತದನುಸಾರ, ಕೆಲವು ಅಗತ್ಯ ಹೆಚ್ಚುವರಿ ಕಾಮಗಾರಿಗಳನ್ನು ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದಿಂದ ಯೋಜಿಸಲಾಗಿದೆ. ಮುಂದುವರೆದು, ರೂ 182.00ರ ಮೂಲ ಅಂದಾಜುಗಳಲ್ಲಿ ಒಳಗೊಂಡಿದ್ದ ಕೆಲವು ಕಾಮಗಾರಿ ಘಟಕಗಳ ಅಂದಾಜುಗಳನ್ನು ಮೇಲ್ಮುಖವಾಗಿ ಪರಿಷ್ಕರಿಸಲಾಗಿದೆ. ರೂ 182.00ರ ಮೂಲ ಅಂದಾಜುಗಳಲ್ಲಿ ಒಳಗೊಂಡಿದ್ದ ಕೆಲವು ಕಾಮಗಾರಿ ಘಟಕಗಳ ಅಂದಾಜು ಮೇಲ್ಮುಖ ಪರಿಷ್ಕರಣೆಯಿಂದ ಎದುರಾಗುವ ಹೆಚ್ಚುವರಿ ಭಾದ್ಯತೆ ಹಾಗೂ ಹೆಚ್ಚುವರಿ ಕಾಮಗಾರಿಗಳ ಅಂದಾಜುಗಳ ವಿವರಗಳನ್ನು ಹಾಗೂ ಈ ಹೆಚ್ಚುವರಿ ಭಾದ್ಯತೆಯಿಂದಾಗಿ ಗುತ್ತಿಗೆ ಮೊತ್ತದಲ್ಲಿ ಉಂಟಾಗುವ ಮೇಲ್ಮುಖ ಪರಿಷ್ಕರಣೆಯ ವಿವರಗಳನ್ನು ಕರ್ನಾಟಕ ಗೃಹ ಮಂಡಳಿಯಿಂದ ಈ ಕೆಳಕಂಡಂತೆ ಪ್ರಸ್ತಾಪಿಸಲಾಗಿದೆ.

| ಕ್ರ.ಸಂ | ವಿವರಗಳು | ಮೊತ್ತ(ರೂ.ಗಳಲ್ಲಿ) |
|---|---|---|
| 1 | ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಸ್ಥಾಪನೆ | 30,00,000/- |
| 2 | ಪ್ರತಿಮೆ ಸ್ಥಾಪನೆಗೆ ಪಾದಪೀಠ ನಿರ್ಮಾಣ | 14,35,601/- |
| 3 | ವಿಶ್ವವಿದ್ಯಾಲಯದ ನಾಮಫಲಕ ಅಳವಡಿಕೆ | 10,20,000/- |
| 4 | ನಾಲಾ ಅಭಿವೃದ್ಧಿ | 86,44,000/- |
| 5 | ಲ್ಯಾಂಡ್‌ಸ್ಕೇಪಿಂಗ್‌ಗೆ ನೀರಿನ ವ್ಯವಸ್ಥೆ | 76,68,492/- |
| 6 | ಸಂಕೀರ್ಣ ಪ್ರದೇಶದಲ್ಲಿ (Plaza AreA) ನೆಲಹಾಸು ಅಳವಡಿಕೆ | 89,91,000/- |
| 7 | ಸಂಕೀರ್ಣ ಪ್ರದೇಶದಲ್ಲಿ (Plaza AreA) ಸ್ಟೇಜ್ ಕಾಮಗಾರಿ | 28,92,736/- |
| 8 | ಲ್ಯಾಂಡ್‌ಸ್ಕೇಪಿಂಗ್ ಕಾಮಗಾರಿ | 18,82,800/- |
| 9 | ಒಟ್ಟು | **3,55,34,629/-** |
| 10 | ಜಿ.ಎಸ್.ಟಿ (12%) | 42,64,155/- |
| 11 | ಒಟ್ಟಾರೆ | **3,97,98,784/-** |
| 12 | ಸರ್ಕಾರದ ಆದೇಶ ಸಂಖ್ಯೆ: ಇಡಿ 466 ಯುಬಿವಿ 2017, ದಿನಾಂಕ:30.01.2018ರಲ್ಲಿ ಅನುಮೋದನೆ ನೀಡಲಾದ ಗುತ್ತಿಗೆ ಮೊತ್ತ | **166,91,51,876/-** |
| 13 | **ಪರಿಷ್ಕೃತ ಗುತ್ತಿಗೆ ಮೊತ್ತ( ಕ್ರ.ಸಂ:11+ 12)** | **170,89,50,660/-** |

ಗುತ್ತಿಗೆ ಮೊತ್ತದಲ್ಲಿನ ಮೇಲ್ಮುಖ ಪರಿಷ್ಕರಣೆ ಹಾಗೂ ಪರಿಷ್ಕೃತ ಗುತ್ತಿಗೆ ಮೊತ್ತಕ್ಕೆ ಅನ್ವಯಿಸುವ ತೆರಿಗೆ/ಶುಲ್ಕ/ಠೇವಣಿಗಳಿಂದಾಗಿ, ಈ ಕೆಳಕಂಡಂತೆ (+)ಪರಿಷ್ಕರಣೆಯಲ್ಲಿ ಪರಿಣಮಿಸುತ್ತದೆ.

| ಕ್ರ.ಸಂ | ವಿವರಗಳು | ಮೊತ್ತ(ರೂ.ಗಳಲ್ಲಿ) |
|---|---|---|
| 1 | ಮೂಲ ಅಂದಾಜು ಮೊತ್ತ | 182,00,00,000/- |
| 2 | ಪರಿಷ್ಕೃತ ಗುತ್ತಿಗೆ ಮೊತ್ತ | 170,89,50,660/- |
| 3 | ಕೆ.ಹೆಚ್.ಬಿ & ಪಿ.ಎಂ.ಸಿ. ಸೇವಾ ಶುಲ್ಕ (ಕ್ರ.ಸಂ:2 ಕ್ಕೆ 5% ರಂತೆ) | 8,54,47,533/- |
| 4 | ವಾಸ್ತುಶಿಲ್ಪಿಗಳ ಸೇವಾ ಶುಲ್ಕ (ಕ್ರ.ಸಂ:2ಕ್ಕೆ 2.75% + 2.75% ರಂತೆ ಲಭ್ಯವಾಗುವ ಮೊತ್ತಕ್ಕೆ 18% ಜಿ.ಎಸ್.ಟಿ) | 5,53,70,001 |
| 5 | ವಿದ್ಯುತ್ ಠೇವಣಿ, ಮೇಲುಸ್ತುವಾರಿ ಶುಲ್ಕ, ವಿದ್ಯುತ್ ಇನ್ಸಪೆಕ್ಟರೇಟ್ ಶುಲ್ಕ ಹಾಗೂ ಲೈನ್ ಸ್ಥಳಾಂತರ (ಮೂಲ ಅಂದಾಜುಗಳಲ್ಲಿ ಅನುಮೋದಿತವಾದ ಮೊತ್ತ) | 1,05,96,084/- |
| 6 | ಇತರೆ ಮತ್ತು ಪೂರ್ಣಾಂಕಗೊಳಿಸುವುದು | 26,35,721/- |
| 7 | **ಒಟ್ಟಾರೆ ಅಂದಾಜು (2+3+4+5+6)** | **186,30,00,000/-** |
| 8 | **ಪರಿಷ್ಕೃತ ಅಂದಾಜು (7-1)** | **4,30,00,000/-** |

ಮೇಲೆ ಕ್ರಮಸಂಖ್ಯೆ(2)ರಲ್ಲಿ ಓದಲಾದ ಆದೇಶದಲ್ಲಿ ಟೆಂಡರ್ ಕಾರ್ಯಾದೇಶ ನೀಡಲು ಅನುಮತಿಸಲಾಗಿರುವ ರೂ.166,99,51,876/-ಗಳಿಗೆ ಪರಿಷ್ಕೃತ ಅಂದಾಜು ಮೊತ್ತವನ್ನು ಸೇರಿಸಿ ಲಭ್ಯವಾಗುವ ರೂ. 170,89,50,660/-ರ ಮೊತ್ತಕ್ಕೆ AEF, KHB, PMC ಶುಲ್ಕಗಳು ಹಾಗೂ ವಿದ್ಯುತ್ ವೆಚ್ಚಗಳನ್ನು ಲೆಕ್ಕ ಹಾಕಲಾದ ಮೇರೆಗೆ ಮೂಲ ಅಂದಾಜು ರೂ. 186,30,00,000/-ಗಳಿಗೆ ಪರಿಷ್ಕೃತವಾಗುತ್ತದೆ. ತತ್ಪರಿಣಾಮವಾಗಿ ಈ ಪ್ರಸ್ತಾವನೆಯು ರೂ 4.30 ಕೋಟಿ ಮೇಲ್ಮುಖ ಪರಿಷ್ಕರಣೆ ಪ್ರಮಾಣವನ್ನು ಹೊಂದಿರುತ್ತದೆ.

ರೂ 4.03 ಕೋಟಿಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಬೇಕಾದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ:10.07.1996ರ ಕಂಡಿಕೆ 46ರಲ್ಲಿ ನಿರ್ದಿಷ್ಟಪಡಿಸಿರುವಂತೆ ಪರಿಷ್ಕೃತ ಅಂದಾಜಿನ ಶೇ.30ಕ್ಕಿಂತ ಕಡಿಮೆ ಇರದಷ್ಟು ಅನುದಾನವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ

ಲಭ್ಯವಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಆಡಳಿತ ವೆಚ್ಚಕ್ಕಾಗಿ ಮೀಸಲಿರುವ ಹಣದಲ್ಲಿ ರೂ 9.00 ಕೋಟಿಗಳನ್ನು ಪರಿಷ್ಕೃತ ಅಂದಾಜು ಕಾಮಗಾರಿಗಳ ನಿರ್ವಹಣೆಗೆ ವಿನಿಯೋಗಿಸಲು ಉದ್ದೇಶಿಸಲಾಗಿದ್ದು, ಈ ಮೊತ್ತವು ಒಟ್ಟಾರೆ ಪರಿಷ್ಕೃತ ಅಂದಾಜಿನ ಮೊತ್ತಕ್ಕಿಂತ ಹೆಚ್ಚಾಗಿರುವುದು ದೃಢವಾಗುತ್ತದೆ.

ಮೂಲತಃ ಒಬ್ಬ ಅರ್ಥಶಾಸ್ತ್ರಜ್ಞರಾದ ಡಾ: ಬಿ.ಆರ್.ಅಂಬೇಡ್ಕರ್ ಇವರ ಆರ್ಥಿಕ ದೂರದೃಷ್ಟಿ ಹಾಗೂ ಪರಿಕಲ್ಪನೆಗಳನ್ನು ಸಾಕಾರಗೊಳಿಸಲು, ಖ್ಯಾತ ಆರ್ಥಿಕ ತಜ್ಞರನ್ನು, ಶೈಕ್ಷಣಿಕ ಮತ್ತು ಸಾಂಸ್ಥಿಕ ಸ್ವಾಯತ್ತತೆ ಹಾಗೂ ಸ್ವಾವಲಂಬಿತನ ರೂಪಿಸಲು ಅನುವಾಗುವ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವ ಸಲುವಾಗಿ ಸ್ಥಾಪಿಸಿ 2017-18ನೇ ಸಾಲಿನಿಂದ ಕಾರ್ಯಾರಂಭಗೊಳಿಸಲಾಗಿರುವ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಅನ್ನು ಬೆಂಗಳೂರು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ ಅಧಿನಿಯಮ,2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ:20) ನ್ನು ಜಾರಿಗೆ ತರುವ ಮೂಲಕ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವನ್ನಾಗಿ ಉನ್ನತೀಕರಿಸಲಾಗಿದೆ. ಸದರಿ ವಿಶ್ವವಿದ್ಯಾಲಯದ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ ಕಟ್ಟಡ ಮತ್ತು ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸುವುದು ಆಜ್ಞಾಪಕವಾಗುವ ಕಾರಣ ಪ್ರಸಕ್ತ ಪ್ರಸ್ತಾವನೆಯು ಯುಕ್ತ ಹಾಗೂ ಅತ್ಯಂತ ಸಮರ್ಥನೀಯವಾಗಿರುವುದನ್ನು ಪರಿಗಣಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ:ಇಡಿ /33/ಯುಬಿವಿ/2021, ಬೆಂಗಳೂರು , ದಿನಾಂಕ:17.03.2021

### ಭಾಗ-1

1) ಪೂರ್ವ ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಯೋಜಿಸಲಾದ ಮೊದಲ ಹಂತದ ಕಾಮಗಾರಿಗಳ ರೂ 182.00 ಕೋಟಿ ಅಂದಾಜುಗಳಿಗೆ ಸಂಬಂಧಿಸಿದಂತೆ ರೂ 4.30 ಕೋಟಿ ಪರಿಷ್ಕೃತ ಅಂದಾಜುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 466 ಯುಬಿವಿ 2017, ದಿನಾಂಕ:30.01.2018ರಲ್ಲಿನ ಷರತ್ತು ನಿಬಂಧನೆಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

2) ಈ ಅಂದಾಜು ಪರಿಷ್ಕರಣೆಯು ಪರಿಣಮಿಸುವ ಗುತ್ತಿಗೆ ಮೊತ್ತ ರೂ. 3,97,98,784/-ಗಳಿಗೆ ಟೆಂಡರ್ ಕಾರ್ಯಾದೇಶ ನೀಡಲು ಅನುಮೋದನೆ ನೀಡಲಾಗಿದೆ.

3) ಈ ಪರಿಷ್ಕೃತ ಅಂದಾಜುಗಳ ಕಾಮಗಾರಿಗಳನ್ನು ಮೂಲ ಗುತ್ತಿಗೆದಾರ ಸಂಸ್ಥೆಯಾದ M/s B.G.Shirke Construction Technology Pvt. Ltd ಗೆ ವಹಿಸಲು ಅನುಮತಿಸಲಾಗಿದೆ.

## ಭಾಗ-2

ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಆಡಳಿತ ವೆಚ್ಚಕ್ಕಾಗಿ ಮೀಸಲಿಡಲಾಗಿರುವ ಹಣದಲ್ಲಿ ರೂ 9.00 ಕೋಟಿಗಳನ್ನು ಈ ಪರಿಷ್ಕೃತ ಅಂದಾಜು ಕಾಮಗಾರಿಗಳ ನಿರ್ವಹಣೆಗಾಗಿ ಬಳಸಿಕೊಳ್ಳಲು ವಿಶ್ವವಿದ್ಯಾಲಯಕ್ಕೆ ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
Mahesh
(ಮಹೇಶ ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2)
17/03/2024

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ/ಆಡಿಟ್), ಕರ್ನಾಟಕ, ಬೆಂಗಳೂರು-560 001
2) ಕುಲಪತಿಗಳು, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಜ್ಞಾನಭಾರತಿ ಮುಖ್ಯ ರಸ್ತೆ, ಟೀಚರ್ಸ್ ಕಾಲೋನಿ, ನ್ಯಾಷನಲ್ ಲಾ ಸ್ಕೂಲ್ ಯುನಿವರ್ಸಿಟಿ ಎದುರು, ಬೆಂಗಳೂರು-560 072
3) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು

--7

4) ಆಯುಕ್ತರು, ಕರ್ನಾಟಕ ಗೃಹ ಮಂಡಳ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು.

5) ಕುಲಸಚಿವರು, ಜ್ಞಾನಬಾರತಿ ಮುಖ್ಯ ರಸ್ತೆ, ಟೀಚರ್ಸ್ ಕಾಲೋನಿ, ನ್ಯಾಷನಲ್ ಲಾ ಸ್ಕೂಲ್ ಯುನಿವರ್ಸಿಟಿ ಎದುರು, ಬೆಂಗಳೂರು-560 072

6) ಮುಖ್ಯ ಅಭಿಯಂತರರು, ಕರ್ನಾಟಕ ಗೃಹ ಮಂಡಳ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು

7) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.

8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

<u>ಪ್ರತಿಗಳು:</u>

1) ಮಾನ್ಯ ಉಪಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ) ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.

2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.

3) ಸರ್ಕಾರದ ಉಪಕಾರ್ಯದರ್ಶಿ (ವಿಶ್ವವಿದ್ಯಾಲಯಗಳು)ಯವರ ಆಪ್ತ ಸಹಾಯಕರು.

# ಕರ್ನಾಟಕ ಸರ್ಕಾರ

ಇಡಿ 33 ಯುಬಿವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 19.03.2021

## ತಿದ್ದುಪಡಿ

ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಯೋಜಿಸಲಾದ ಮೊದಲ ಹಂತದ ಕಾಮಗಾರಿಗಳ ರೂ 182.00 ಕೋಟಿ ಅಂದಾಜುಗಳಿಗೆ ಸಂಬಂಧಿಸಿದಂತೆ ರೂ 4.30 ಕೋಟಿ ಪರಿಷ್ಕೃತ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುವ ಸರ್ಕಾರದ ಆದೇಶ ಸಂಖ್ಯೆ:ಇಡಿ/33/ಯುಬಿವಿ/2021, ದಿನಾಂಕ:17.03.2021ರ ಪ್ರಸ್ತಾವನೆ ಭಾಗದಲ್ಲಿ:-

| ಪುಟ ಸಂಖ್ಯೆ | ಪಂಕ್ತಿ(ಸಾಲು) ಸಂಖ್ಯೆ (ತಃಖ್ತೆಯನ್ನು ಹೊರತು ಪಡಿಸಿ) | ನಮೂದಾಗಿರುವ ಅಕ್ಷರ, ಅಂಕಿ ಹಾಗೂ ಪದ | ತಿದ್ದಿ ಓದಿಕೊಳ್ಳುವುದು |
|---|---|---|---|
| 4 | 8 | ರೂ. 4.03 ಕೋಟಿಗಳ | "ರೂ. 4.30 ಕೋಟಿಗಳ" |

ಉಳಿದಂತೆ, ಸರ್ಕಾರದ ಆದೇಶ ಸಂಖ್ಯೆ:ಇಡಿ/33/ಯುಬಿವಿ/2021, ದಿನಾಂಕ:17.03.2021ರಲ್ಲಿ ಬೇರಾವ ಮಾರ್ಪಾಟುಗಳಿರುವುದಿಲ್ಲ.

23/3/2021

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹೇಶ ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2)

19/03/2021

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ/ಆಡಿಟ್), ಕರ್ನಾಟಕ, ಬೆಂಗಳೂರು-560 001

2) ಕುಲಪತಿಗಳು, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಜ್ಞಾನಭಾರತಿ ಮುಖ್ಯ ರಸ್ತೆ, ಟೀಚರ್ಸ್ ಕಾಲೋನಿ, ನ್ಯಾಷನಲ್ ಲಾ ಸ್ಕೂಲ್ ಯುನಿವರ್ಸಿಟಿ ಎದುರು, ಬೆಂಗಳೂರು-560 072

--2

3) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು

4) ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು.

5) ಕುಲಸಚಿವರು, ಜ್ಞಾನಬಾರತಿ ಮುಖ್ಯ ರಸ್ತೆ, ಟೀಚರ್ಸ್ ಕಾಲೋನಿ, ನ್ಯಾಷನಲ್ ಲಾ ಸ್ಕೂಲ್ ಯುನಿವರ್ಸಿಟಿ ಎದುರು, ಬೆಂಗಳೂರು-560 072

6) ಮುಖ್ಯ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು

7) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.

8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

<u>ಪ್ರತಿಗಳು:</u>

1) ಮಾನ್ಯ ಉಪಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ) ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.

2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.

3) ಸರ್ಕಾರದ ಉಪಕಾರ್ಯದರ್ಶಿ (ವಿಶ್ವವಿದ್ಯಾಲಯಗಳು)ಯವರ ಆಪ್ತ ಸಹಾಯಕರು.

(4)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಡಾ: ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಮೊದಲನೇ ಹಂತದಲ್ಲಿ ಕಟ್ಟಡಗಳಿಗೆ ಒಳಾಂಗಣ ವಿನ್ಯಾಸ ಕಾಮಗಾರಿಯನ್ನು ಕೈಗೊಳ್ಳಲು ಹೊರಡಿಸಲಾದ ಅಲ್ಪಾವಧಿ ಟೆಂಡರ್ ಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ ಮುಖ್ಯ ಆಡಳಿತಾಧಿಕಾರಿ, ಬೆಂಗಳೂರು ಡಾ: ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಇವರ ಪತ್ರ ಸಂಖ್ಯೆ:ಬೇಸ್/12/2019 ದಿನಾಂಕ: 19-06-2019.

*****

**ಪ್ರಸ್ತಾವನೆ:**

ಬೆಂಗಳೂರು ಡಾ: ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಮೊದಲನೇ ಹಂತದಲ್ಲಿ ಕಟ್ಟಡಗಳಿಗೆ ಒಳಾಂಗಣ ವಿನ್ಯಾಸ ಕಾಮಗಾರಿಯನ್ನು ಕೈಗೊಳ್ಳಲು ಹೊರಡಿಸಲಾದ ರೂ.3,20,89,567.00 ಗಳ ಅಲ್ಪಾವಧಿ ಟೆಂಡರ್ ಗೆ ಅನುಮೋದನೆ ನೀಡಿ, ಮೂಲ ಅಂದಾಜು ವೆಚ್ಚಗಳಲ್ಲಿ ಸೇರ್ಪಡೆಯಾಗದಿರುವ ಕಾಮಗಾರಿ/ವಸ್ತುಗಳಿಗೆ ರೂ.15.00 ಕೋಟಿ ಅನುದಾನವನ್ನು ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆಯಡಿ ಬಿಡುಗಡೆ ಮಾಡುವಂತೆ ಮುಖ್ಯ ಆಡಳಿತಾಧಿಕಾರಿ, ಬೆಂಗಳೂರು ಡಾ: ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಇವರು ಮೇಲೆ ಓದಲಾದ ದಿನಾಂಕ: 19-06-2019 ರ ಪತ್ರದಲ್ಲಿ ಕೋರಿರುತ್ತಾರೆ.

ಮೇಲಿನ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರಿ ಆದೇಶ ಸಂಖ್ಯೆ:ಸಕಇ 102 ಪಕವಿ 2019, ಬೆಂಗಳೂರು, ದಿನಾಂಕ: 31-07-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಬೆಂಗಳೂರು ಡಾ: ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಮೊದಲನೇ ಹಂತದಲ್ಲಿ ಕಟ್ಟಡಗಳಿಗೆ ಒಳಾಂಗಣ ವಿನ್ಯಾಸ ಕಾಮಗಾರಿಯನ್ನು ಕೈಗೊಳ್ಳಲು ಸಮಾಜ ಕಲ್ಯಾಣ ಇಲಾಖೆಯಿಂದ ರೂ.3.61 ಕೋಟಿ (ಮೂರು ಕೋಟಿ ಅರವತ್ತೊಂದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು (ಟೆಂಡರ್ ನಲ್ಲಿ ಗುತ್ತಿಗೆದಾರರು ಒಪ್ಪಿರುವ ಮೊತ್ತ ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು (ಒಮ್ಮೆ ಮಾತ್ರ) ಮಂಜೂರಾತಿ ನೀಡಿ ಆದೇಶಿಸಿದೆ.

**ಷರತ್ತುಗಳು:-**

1. ವಿದ್ಯಾರ್ಥಿ ನಿಲಯದಲ್ಲಿ ಎಸ್.ಸಿ./ ಎಸ್.ಟಿ ವಿದ್ಯಾರ್ಥಿಗಳಿಗೆ ಪ್ರಥಮ ಆದ್ಯತೆ ಮೇಲೆ ಕಡ್ಡಾಯವಾಗಿ ಪ್ರವೇಶ ನೀಡತಕ್ಕದ್ದು.
2. ಇನ್ನು ಮುಂದೆ ಅನುದಾನವನ್ನು ಉನ್ನತ ಶಿಕ್ಷಣ ಇಲಾಖೆಯಿಂದಲೇ ಪಡೆಯತಕ್ಕದ್ದು.

-----2

ಈ ಅನುದಾನವನ್ನು ಎಸ್.ಸಿ.ಎಸ್.ಪಿ ಲೆಕ್ಕ ಶೀರ್ಷಿಕೆ: 4225-01-796-0-01 ರಡಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಡಿ ಇತರ ಕಾರ್ಯಕ್ರಮಗಳಿಗೆ ನಿಗದಿಪಡಿಸಿದ ರೂ.24.00 ಕೋಟಿಗಳಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 03 ಟಿಎಫ್‌ಪಿ 2018, ದಿನಾಂಕ: 14-05-2018 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

31/7/2019

(ಪಿ.ಎನ್.ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-1(ಪ್ರ),
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು ನಗರ. ಜಿಲ್ಲೆ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್.
5. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ.
6. ಮುಖ್ಯ ಆಡಳಿತಾಧಿಕಾರಿ, ಬೆಂಗಳೂರು ಡಾ: ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್, ರಾಜಾಜಿ ಹಾಲ್, ಸೆಂಟ್ರಲ್ ಕಾಲೇಜು ಕ್ಯಾಂಪಾಸ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - 561001.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇವರ ಆಪ್ತ ಕಾರ್ಯದರ್ಶಿ, 2ನೇ ಮಹಡಿ, ವಿಧಾನಸೌಧ,
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಇವರ ಆಪ್ತಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ,
4. ಸರ್ಕಾರದ ಉಪ ಕಾರ್ಯದರ್ಶಿ-1ರವರ ಆಪ್ತಸಹಾಯಕರು, ಸಮಾಜ ಕಲ್ಯಾಣ ಇಲಾಖೆ.

*********

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೊದಲ ಹಂತದ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ಪೈಕಿ ಅಕಾಡೆಮಿಕ್ ಬ್ಲಾಕ್ ಹಾಗೂ ಗ್ರಂಥಾಲಯ ಕಟ್ಟಡಗಳ ಒಳಾಂಗಣ ವಿನ್ಯಾಸಕ್ಕೆ ಅತ್ಯವಶ್ಯಕವಾಗಿರುವ ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016, ದಿ:16.02.2017
2) ಸರ್ಕಾರದ ಆದೇಶ ಸಂಖ್ಯೆ: ಇಡಿ 466 ಯುಬಿವಿ 2017, ದಿ:30.01.2018
3) ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಇವರ ಪತ್ರಸಂಖ್ಯೆ:ಬೇಸ್/80/2019, ದಿ:11.11.2019
4) ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಇವರ ಪತ್ರಸಂಖ್ಯೆ:ಬೇಸ್/80/2019, ದಿ:24.12.2019
5) ಸರ್ಕಾರದ ಆದೇಶ ಸಂಖ್ಯೆ:ಸಕಇ 295 ಪಕವಿ 2019(ಭಾಗ) ದಿನಾಂಕ:07.02.2020

ಪ್ರಸ್ತಾವನೆ:

ಭಾರತ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಇವರ 125ನೇ ಜನ್ಮದಿನಾಚರಣೆಯ ಸ್ಮರಣಾರ್ಥವಾಗಿ ಸ್ವತಂತ್ರ ಸ್ವಾಯತ್ತ ಶೈಕ್ಷಣಿಕ ಸಂಸ್ಥೆಯನ್ನಾಗಿ ಮೇಲೆ ಓದಲಾದ ಕ್ರಮಸಂಖ್ಯೆ(1)ರ ಆದೇಶದನ್ವಯ **ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್** ಅನ್ನು ಸ್ಥಾಪಿಸಿ 2017-18ನೇ ಸಾಲಿನಿಂದ ಕಾರ್ಯಾರಂಭಗೊಳಿಸಲಾದೆ. ಬೆಂಗಳೂರು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ ಅಧಿನಿಯಮ, 2019(2019ರ ಕರ್ನಾಟಕ ಅಧಿನಿಯಮ ಸಂಖ್ಯೆ:20)ನ್ನು ಜಾರಿಗೆ ತರುವ ಮೂಲಕ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವನ್ನಾಗಿ ಉನ್ನತೀಕರಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣದಲ್ಲಿ ಲೀಸ್ ಆಧಾರದ ಮೇಲೆ ಮಂಜೂರು ಮಾಡಲಾದ ಒಟ್ಟು 43.35 ಎಕರೆ ಜಮೀನಿನಲ್ಲಿ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಯೋಜಿಸಲಾದ ಮೊದಲ ಹಂತದ ಕಾಮಗಾರಿಗಳ ಅಂದಾಜು ರೂ 182.00 ಕೋಟಿಗಳಿಗೆ (ಒಂದು ನೂರ ಎಂಭತ್ತೆರಡು ಕೋಟಿ ರೂಪಾಯಿಗಳು) ಮೇಲೆ ಕ್ರಮಸಂಖ್ಯೆ(2)ರಲ್ಲಿ ಓದಲಾದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ, ರೂ. 166,99,51,876/- ಗಳ (ಒಂದು ನೂರ ಅರವತ್ತಾರು ಕೋಟಿ ತೊಂಭತ್ತೊಂಭತ್ತು ಲಕ್ಷ ಐವತ್ತೊಂದು ಸಾವಿರದ ಎಂಟು ನೂರ ಎಪ್ಪತ್ತಾರು ರೂಪಾಯಿಗಳು ಮಾತ್ರ) ಮೊತ್ತಕ್ಕೆ M/s B.G.Shirke Construction Technology Pvt. Ltd ಇವರಿಗೆ ಟೆಂಡರ್ ಕಾರ್ಯಾದೇಶ ನೀಡಲು ಅನುಮತಿಸಲಾಗಿದೆ.

ಪೂರ್ವೋಕ್ತ ಆಡಳಿತಾತ್ಮಕ ಅನುಮೋದನೆ ಮೇರೆಗೆ ಕಾರ್ಯಾರಂಭಗೊಂಡು ಸಮರೋಪಾದಿಯಲ್ಲಿ ಪ್ರಗತಿಯಲ್ಲಿರುವ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೊದಲ ಹಂತದ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ಪೈಕಿ ಅಕಾಡೆಮಿಕ್ ಬ್ಲಾಕ್ ಹಾಗೂ ಗ್ರಂಥಾಲಯ ಕಟ್ಟಡಗಳ ಒಳಾಂಗಣ ವಿನ್ಯಾಸ ಕಾಮಗಾರಿಗಳ ಒಟ್ಟು ರೂ. 7,09,00,000/-ಗಳ ಅಂದಾಜುಗಳಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ, ಅಂದಾಜು ಪಟ್ಟಿ ಹಾಗೂ ರೇಖಾನಕ್ಷೆಗಳನ್ನೊಳಗೊಂಡ ಯೋಜನಾ ವರದಿಯೊಂದಿಗೆ ಮೇಲೆ ಓದಲಾದ ಕ್ರಮಸಂಖ್ಯೆ(3)ರ ಪತ್ರದಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಮುಂದುವರೆದು, ಮೇಲೆ ಕ್ರಮಸಂಖ್ಯೆ(2)ರಲ್ಲಿ ಓದಲಾದ ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುವ ಅಂದಾಜುಗಳಲ್ಲಿ, ಪ್ರಸ್ತಾಪಿತ ಒಳಾಂಗಣ ವಿನ್ಯಾಸ ಕಾಮಗಾರಿಗಳ ಅಂದಾಜುಗಳು ಅಥವಾ ಘಟಕಗಳು ಒಳಗೊಂಡಿರುವುದಿಲ್ಲವೆಂಬ ಬಗ್ಗೆ ದೃಢೀಕರಣವನ್ನು ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಸಾಮಾನ್ಯ ಕಾರ್ಯಕ್ರಮದಡಿ ಒದಗಿಸಲಾಗುವ ಅನುದಾನದಿಂದ ಒಳಾಂಗಣ ವಿನ್ಯಾಸ ಕಾಮಗಾರಿಗಳಿಗೆ

--2

ಅಂದಾಜಿಸಲಾಗಿರುವ ಮೊತ್ತವನ್ನು ಭರಿಸಲಾಗುವ ಬಗ್ಗೆ ಮಾಹಿತಿಯನ್ನು ಮೇಲೆ ಕ್ರಮಸಂಖ್ಯೆ(4)ರಲ್ಲಿ ಓದಲಾದ ಪತ್ರದಲ್ಲಿ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಸಲ್ಲಿಸಿರುತ್ತಾರೆ.

ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೊದಲ ಹಂತದ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ಪೈಕಿ ಅಕಾಡೆಮಿಕ್ ಬ್ಲಾಕ್ ಹಾಗೂ ಗ್ರಂಥಾಲಯ ಕಟ್ಟಡಗಳ ಒಳಾಂಗಣ ವಿನ್ಯಾಸಕ್ಕೆ ಅತ್ಯವಶ್ಯಕವಾಗಿರುವ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿ, ಸದರಿ ಸಂಸ್ಥೆಯಿಂದ ಸಲ್ಲಿಸಲಾಗಿರುವ ರೂ. 7,09,00,000/-ಗಳ ಅಂದಾಜು ವೆಚ್ಚದ ಲಘು ಕ್ರಿಯಾಯೋಜನೆಯ ಕಾಮಗಾರಿ ಘಟಕಗಳು ಹಾಗೂ ಅಂದಾಜು ವೆಚ್ಚದ ವಿವರಗಳನ್ನು ಈ ಕೆಳಕಂಡಂತೆ ಸಾರಸಂಗ್ರಹಿಸಲಾಗಿದೆ.

| ಕ್ರ. ಸಂ. | ಕಾಮಗಾರಿಗಳ ಹೆಸರು | ಅಂದಾಜು ಮೊತ್ತ (ರೂ. ಗಳಲ್ಲಿ) |
|---|---|---|
| 1 | ಅಕಾಡೆಮಿಕ್ ಬ್ಲಾಕ್ ಕಟ್ಟಡದ ಒಳಾಂಗಣ ವಿನ್ಯಾಸ ಕಾಮಗಾರಿಗಳು | 3,84,40,617.00 |
| 2 | ಲೈಬ್ರರಿ ಬ್ಲಾಕ್ ಕಟ್ಟಡದ ಒಳಾಂಗಣ ವಿನ್ಯಾಸ ಕಾಮಗಾರಿಗಳು | 2,10,22,461.00 |
| 3 | **ಮೂಲ ಅಂದಾಜು ಮೊತ್ತ** | **5,94,63,078.00** |
| 4 | ದರ ಏರಿಕೆ/ವ್ಯತ್ಯಯದ ಪರಿಣಾಮದಿಂದಾಗಿ ಶೇ.10ರ ದರದಲ್ಲಿ ಕಲ್ಪಿಸಲಾಗಿರುವ ಅವಕಾಶ | 59,46,307.00 |
| 5 | ನಿವ್ವಳ ಅಂದಾಜು (3+4) | 6,54,09,385.00 |
| 6 | ಪಿ.ಎಂ.ಸಿ ಮತ್ತು ಕೆ.ಹೆಚ್.ಬಿ ಶುಲ್ಕ(ಶೇ.5 ರ ದರದಲ್ಲಿ) | 32,70,469.00 |
| 7 | ಎ.ಇ.ಎಫ್ ಶುಲ್ಕ (2.75%) ಮತ್ತು ಜಿ.ಎಸ್.ಟಿ.(18%) | 21,22,534.00 |
| 8 | ಇತರೆ ಮತ್ತು ಪೂರ್ಣಾಂಕಗೊಳಿಸುವುದು | 97,612.00 |
| 9 | **ಒಟ್ಟಾರೆ ಯೋಜನಾ ಅಂದಾಜು ವೆಚ್ಚ (5+6+7+8)** | **7,09, 00,000.00** |

ಯಾವುದೇ ಕಾಮಗಾರಿ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಬೇಕಾದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ:10.07.1996ರ ಕಂಡಿಕೆ 46ರಲ್ಲಿ ನಿರ್ದಿಷ್ಟಪಡಿಸಿರುವಂತೆ ಸದರಿ ಕಾಮಗಾರಿಯ ಮೂಲ ಅಂದಾಜಿನ ಶೇ.30ಕ್ಕಿಂತ ಕಡಿಮೆ ಇರದಷ್ಟು ಅನುದಾನವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಲಭ್ಯವಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕಾಗುತ್ತದೆ.

ವಿವಿಧ ಕಾರ್ಯಕ್ರಮಗಳಿಗೆ ಒದಗಿಸಲಾದ ಅನುದಾನದ ಪೈಕಿ ರೂ.35.00 ಕೋಟಿಗಳನ್ನು ಮರು ಹಂಚಿಕೆ ಮಾಡುವ ಮೂಲಕ ಮೇಲೆ ಕ್ರಮಸಂಖ್ಯೆ: (5)ರಲ್ಲಿ ಓದಲಾದ ಆದೇಶದನ್ವಯ ಸಮಾಜ ಕಲ್ಯಾಣ ಇಲಾಖೆಯಿಂದ, ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೊದಲ ಹಂತದ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ನಿರ್ವಹಣೆಗಾಗಿ ರೂ. 35.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ಆದುದರಿಂದ, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿರುವ ರೂ.106.96 ಕೋಟಿಗಳ ಪೈಕಿ ಉಳಿಕೆಯಲ್ಲಿರುವ ಅನುದಾನ ಸೇರಿದಂತೆ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಸ್ತುತ ಒದಗಿಸಲಾಗಿರುವ ಅನುದಾನದ ಪ್ರಮಾಣ ಒಟ್ಟಾರೆ ಅಂದಾಜಿನ ಶೇ.30ಕ್ಕಿಂತ ಹೆಚ್ಚಿರುವುದು ದೃಢವಾಗುತ್ತದೆ.

ಮೂಲತಃ ಒಬ್ಬ ಅರ್ಥಶಾಸ್ತ್ರಜ್ಞರಾದ ಡಾ: ಬಿ.ಆರ್.ಅಂಬೇಡ್ಕರ್ ಇವರ ಆರ್ಥಿಕ ದೂರದೃಷ್ಟಿ ಹಾಗೂ ಪರಿಕಲ್ಪನೆಗಳನ್ನು ಸಾಕಾರಗೊಳಿಸಲು, ಖ್ಯಾತ ಆರ್ಥಿಕ ತಜ್ಞರನ್ನು, ಶೈಕ್ಷಣಿಕ ಮತ್ತು ಸಾಂಸ್ಥಿಕ ಸ್ವಾಯತ್ತತೆ ಹಾಗೂ ಸ್ವಾವಲಂಬಿತನ ರೂಪಿಸಲು ಅನುವಾಗುವ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವ ಸಲುವಾಗಿ ಸ್ಥಾಪಿಸಿ 2017-18ನೇ ಸಾಲಿನಿಂದ ಕಾರ್ಯಾರಂಭಗೊಳಿಸಲಾಗಿರುವ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಅನ್ನು ಬೆಂಗಳೂರು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ ಅಧಿನಿಯಮ,2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ:20) ನ್ನು ಜಾರಿಗೆ ತರುವ

ಮೂಲಕ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವನ್ನಾಗಿ ಉನ್ನತೀಕರಿಸಲಾಗಿದೆ. ಸದರಿ ವಿಶ್ವವಿದ್ಯಾಲಯದ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ ಕಟ್ಟಡ ಮತ್ತು ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸುವುದು ಅಜ್ಞಾಪಕವಾಗುವ ಕಾರಣ ಪ್ರಸಕ್ತ ಪ್ರಸ್ತಾವನೆಯು ಯುಕ್ತ ಹಾಗೂ ಅತ್ಯಂತ ಸಮರ್ಥನೀಯವಾಗಿರುವುದನ್ನು ಪರಿಗಣಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 466 ಯುಬಿವಿ 2017, ಬೆಂಗಳೂರು, ದಿ:29.05.2020**

ಪೂರ್ವ ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಏಕಾತ್ಮಕ ವಿಶ್ವವಿದ್ಯಾಲಯವನ್ನಾಗಿ ಉನ್ನತೀಕರಿಸಲಾಗಿರುವ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೊದಲ ಹಂತದ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ಪೈಕಿ ಅಕಾಡೆಮಿಕ್ ಬ್ಲಾಕ್ ಹಾಗೂ ಗ್ರಂಥಾಲಯ ಕಟ್ಟಡಗಳ ಒಳಾಂಗಣ ವಿನ್ಯಾಸಕ್ಕೆ ಯೋಜಿಸಲಾಗಿರುವ ಕಾಮಗಾರಿಗಳ ರೂ. 7,09,00,000/- (ಏಳು ಕೋಟಿ ಒಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಮೊತ್ತದ ಅಂದಾಜುಗಳಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರಡಿ ರಚಿಸಲಾದ ನಿಯಮಗಳಲ್ಲಿ ಗೊತ್ತುಪಡಿಸಲಾಗಿರುವ ಉಪಬಂಧಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ಕಾಮಗಾರಿಗಳನ್ನು ಅತ್ಯಂತ ಪಾರದರ್ಶಕವಾಗಿ ನಿರ್ವಹಿಸತಕ್ಕದ್ದು;
2) ಕಾಮಗಾರಿಗಳ ಅಂದಾಜುಗಳಿಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿ ಪಡೆಯತಕ್ಕದ್ದು;
3) ಕಾಮಗಾರಿ ಗುಣಮಟ್ಟವನ್ನು ಪರಿಶೀಲಿಸಲು 3ನೇ ವ್ಯಕ್ತಿ ಅಥವಾ ಪರಿವೀಕ್ಷಣಾ ತಪಾಸಣೆ ನಡೆಸತಕ್ಕದ್ದು;
4) ಪ್ರಸ್ತಾಪಿತ ಕಾಮಗಾರಿಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸಲು ಕ್ರಮವಹಿಸತಕ್ಕದ್ದು;
5) ಉನ್ನತ ಶಿಕ್ಷಣ ಇಲಾಖೆಯು ಕಾಲಕಾಲಕ್ಕೆ ಕಾಮಗಾರಿಗಳ ಬಗ್ಗೆ ಪರಿಶೀಲನೆ ಅಥವಾ ಪರಿವೀಕ್ಷಣೆ ನಡೆಸುವ ಅಧಿಕಾರ ಹೊಂದಿರುತ್ತದೆ;
6) ಈಆದೇಶನ್ವಯ ನೀಡಲಾಗಿರುವ ಆಡಳಿತಾತ್ಮಕ ಅನುಮೋದನೆಯನ್ನು ಹೆಚ್ಚಿನ ಅನುದಾನ ಬಿಡುಗಡೆಗೆ ಮಂಜೂರಾತಿ ಎಂದು ಪರಿಭಾವಿಸತಕ್ಕದ್ದಲ್ಲ ಅಥವಾ ಅರ್ಥೈಸಿಕೊಳ್ಳತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹೇಶ ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2)

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ/ಆಡಿಟ್), ಕರ್ನಾಟಕ, ಬೆಂಗಳೂರು-560 001

--4

2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4) ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಅರಮನೆ ರಸ್ತೆ, ಬೆಂಗಳೂರು.
5) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು
6) ಆಯುಕ್ತರು, ಕರ್ನಾಟಕ ಗೃಹ ಮಂಡಳ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು.
7) ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
8) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್, ರಾಜಾಜಿ ಹಾಲ್, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-560 001.
9) ಮುಖ್ಯ ಅಭಿಯಂತರರು(ದಕ್ಷಿಣ ಇಲಾಖೆ), ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ, ಕೆ.ಆರ್.ವೃತ್ತ, ಬೆಂಗಳೂರು
10) ಮುಖ್ಯ ಅಭಿಯಂತರರು, ಕರ್ನಾಟಕ ಗೃಹ ಮಂಡಳ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು
11) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
12) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

**ಪ್ರತಿಗಳು:**

1) ಮಾನ್ಯ ಉಪಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ) ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.
3) ಸರ್ಕಾರದ ಉಪಕಾರ್ಯದರ್ಶಿ (ವಿಶ್ವವಿದ್ಯಾಲಯಗಳು)ಯವರ ಆಪ್ತ ಸಹಾಯಕರು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯದ ಮೊದಲನೇ ಹಂತದ ಕಟ್ಟಡಗಳಲ್ಲಿನ ಗ್ರಂಥಾಲಯ ಮತ್ತು ಅಕಾಡೆಮಿಕ್ ಬ್ಲಾಕ್‌ಗಳ ವಿನ್ಯಾಸ ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಕುಲಸಚಿವರು, ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: BASE/80/2019/T299, ದಿನಾಂಕ: 18.03.2022.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 126 ಹೆಚ್‌ಪಿಯು 2021, ದಿನಾಂಕ: 08.03.2022

ಪ್ರಸ್ತಾವನೆ:

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 18/3/2022ರ ಪ್ರಸ್ತಾವನೆಯಲ್ಲಿ ಕುಲಸಚಿವರು, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರು ಸರ್ಕಾರದ ಆದೇಶ ಸಂಖ್ಯೆ: ಇಡಿ 466 ಯುಬಿವಿ 2017, ದಿನಾಂಕ: 29/5/2020ರಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಅಕಾಡಿಮಿಕ್ ಬ್ಲಾಕ್‌ಗಳ ಒಳಾಂಗಣ ವಿನ್ಯಾಸ ಕಾಮಗಾರಿಗಳ ನಿರ್ಮಾಣಕ್ಕೆ ಸಲ್ಲಿಸಲಾಗಿದ್ದ ರೂ.7.09ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ವಿಶ್ವವಿದ್ಯಾಲಯದ ಉದ್ಘಾಟನೆ ನೆರವೇರಿಸಲು ಮತ್ತು ಆವರಣದಲ್ಲಿ ನಿರ್ಮಿಸಿರುವ ಸಂವಿಧಾನ ಶಿಲ್ಪಿ ಭಾರತರತ್ನ ಡಾ: ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣಗೊಳಿಸಲು ಹಾಗೂ ಒಳಾಂಗಣ ವಿನ್ಯಾಸದ ಕೆಲವೊಂದು ಕಾಮಗಾರಿಗಳನ್ನು ಹೆಚ್ಚುವರಿಯಾಗಿ ಕಾರ್ಯಗತಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದ್ದು, ಸದರಿ ಹೆಚ್ಚುವರಿ ಕಾಮಗಾರಿಗಳ ಮೊತ್ತ ರೂ.1,28,35,000/-ಗಳಾಗಿದ್ದು, ಮೂಲ ಅಂದಾಜು ಮೊತ್ತ ರೂ. 7,09,00,000/-ಗಳಾಗಿದ್ದು, ಒಟ್ಟಾರೆ ರೂ.8,37,35,000/-(ಶೇ.18% ಹೆಚ್ಚುವರಿ)ಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ (Furnishing) ವೆಚ್ಚವನ್ನು ಭರಿಸುವ ಸಲುವಾಗಿ ರೂ.2500.00ಲಕ್ಷ (Rupees twentyfive thousand lakh only)ಗಳನ್ನು ಹೆಚ್ಚುವರಿಯಾಗಿ ಬಿಡುಗಡೆಗೊಳಿಸಿ ಆದೇಶಿಸಿದೆ.

ಕುಲಸಚಿವರು, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರು ಕೋರಿರುವಂತೆ, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಅಕಾಡಿಮಿಕ್ ಬ್ಲಾಕ್‌ಗಳ ಒಳಾಂಗಣ ವಿನ್ಯಾಸ ಕಾಮಗಾರಿಗಳ ನಿರ್ಮಾಣಕ್ಕೆ ಸಲ್ಲಿಸಲಾಗಿದ್ದ ರೂ.7.09ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ವಿಶ್ವವಿದ್ಯಾಲಯದ ಉದ್ಘಾಟನೆ ನೆರವೇರಿಸಲು ಮತ್ತು ಆವರಣದಲ್ಲಿ ನಿರ್ಮಿಸಿರುವ ಸಂವಿಧಾನ ಶಿಲ್ಪಿ ಭಾರತರತ್ನ ಡಾ: ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣಗೊಳಿಸಲು ಒಳಾಂಗಣ ವಿನ್ಯಾಸದ ಕೆಲವೊಂದು ಕಾಮಗಾರಿಗಳನ್ನು ಹೆಚ್ಚುವರಿಯಾಗಿ ಕಾರ್ಯಗತಗೊಳಿಸಿರುವ ಹೆಚ್ಚುವರಿ ಕಾಮಗಾರಿಗಳ ಮೊತ್ತ ರೂ.1,28,35,000/-ಗಳಾಗಿದ್ದು, ಮೂಲ ಅಂದಾಜು ಮೊತ್ತ ರೂ.7,09,00,000/-ಗಳಾಗಿದ್ದು, ಒಟ್ಟಾರೆ ರೂ.8,37,35,000/-(ಶೇ.18% ಹೆಚ್ಚುವರಿ)ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಈಗಾಗಲೇ ಬಿಡುಗಡೆಯಾಗಿರುವ ರೂ.2500.00ಲಕ್ಷಗಳಲ್ಲಿ ವೆಚ್ಚ

ಭರಿಸಲು ಅನುಮತಿ ನೀಡುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಇಡಿ 126 ಹೆಚ್‌ಪಿಯು 2021,</u>
<u>ಬೆಂಗಳೂರು, ದಿನಾಂಕ: 10ನೇ ಏಪ್ರಿಲ್, 2022.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಅಕಾಡೆಮಿಕ್ ಬ್ಲಾಕ್‌ಗಳ ಒಳಾಂಗಣ ವಿನ್ಯಾಸ ಕಾಮಗಾರಿಗಳ ನಿರ್ಮಾಣಕ್ಕೆ ಸಲ್ಲಿಸಲಾಗಿದ್ದ ರೂ.7.09ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಿಸಿರುವ ಸಂವಿಧಾನ ಶಿಲ್ಪಿ ಭಾರತರತ್ನ ಡಾ: ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣಗೊಳಿಸಲು ಒಳಾಂಗಣ ವಿನ್ಯಾಸದ ಕಾಮಗಾರಿಗಳನ್ನು ಹೆಚ್ಚುವರಿಯಾಗಿ ಕಾರ್ಯಗತಗೊಳಿಸಿರುವ ಹೆಚ್ಚುವರಿ ಕಾಮಗಾರಿಗಳ ಮೊತ್ತ ರೂ.1,28,35,000/-ಗಳು ಸೇರಿ ಒಟ್ಟಾರೆ ರೂ.8,37,35,000/-ಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ ಹಾಗೂ ಈ ಹೆಚ್ಚುವರಿ ಮೊತ್ತವನ್ನು ಈಗಾಗಲೇ ಬಿಡುಗಡೆಯಾಗಿರುವ ರೂ.2500.00ಲಕ್ಷಗಳಲ್ಲಿ ಭರಿಸಲು ಅನುಮತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 3 ಟಿಎಫ್‌ಪಿ 2020, ದಿನಾಂಕ: 31/8/2020ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,

10/03/2022

(ಎಂ.ಜಿ.ವೆಂಕಟೇಶಯ್ಯ)
ಸರ್ಕಾರದ ಉಪ ಕಾರ್ಯದರ್ಶಿ,
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ.

<u>ಇವರಿಗೆ:-</u>

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಕುಲಸಚಿವರು, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು.
4. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಅಪರ ನಿರ್ದೇಶಕರು, ಟಿಎನ್‌ಎಂಸಿ, ಖನಿಜಭವನ, ಬೆಂಗಳೂರು.
7. ಜಿಲ್ಲಾ ಖಜಾನಾಧಿಕಾರಿಗಳು, ಬೆಂಗಳೂರು.
8. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)ರವರ ಆಪ್ತ ಕಾರ್ಯದರ್ಶಿಗಳು.
10. ಸರ್ಕಾರದ ಉಪ ಕಾರ್ಯದರ್ಶಿ (ಎಫ್‌ಆರ್ ಮತ್ತು ಬಿಸಿಸಿ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
11. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಪ್ರತಿ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೊದಲ ಹಂತದ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ಪೈಕಿ ಆಡ್ಮಿನಿಸ್ಟ್ರೇಷನ್ ಬ್ಲಾಕ್ ಹಾಗೂ ಸ್ಟುಡೆಂಟ್ ಸೆಂಟರ್ ಬ್ಲಾಕ್ ಕಟ್ಟಡಗಳ ಒಳಾಂಗಣ ವಿನ್ಯಾಸಕ್ಕೆ ಅತ್ಯವಶ್ಯಕವಾಗಿರುವ ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ

ಓದಲಾಗಿದೆ
1) ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016, ದಿ:16.02.2017
2) ಸರ್ಕಾರದ ಆದೇಶ ಸಂಖ್ಯೆ: ಇಡಿ 466 ಯುಬಿವಿ 2017, ದಿ:30.01.2018
3) ಸರ್ಕಾರದ ಆದೇಶ ಸಂಖ್ಯೆ:ಇಡಿ 466 ಯುಬಿವಿ 2017, ದಿನಾಂಕ:29.05.2020
4) ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರ ಏಕ ಕಡತ ಸಂಖ್ಯೆ:ಬೇಸ್/31/2020 (30)

********

**ಪ್ರಸ್ತಾವನೆ:**

ಭಾರತ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಇವರ 125ನೇ ಜನ್ಮದಿನಾಚರಣೆಯ ಸ್ಮರಣಾರ್ಥ ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಅನ್ನು ಸ್ವತಂತ್ರ ಸ್ವಾಯತ್ತ ಶೈಕ್ಷಣಿಕ ಸಂಸ್ಥೆಯನ್ನಾಗಿ ಮೇಲೆ ಓದಲಾದ ಕ್ರಮಸಂಖ್ಯೆ(1)ರ ಆದೇಶದನ್ವಯ ಸ್ಥಾಪಿಸಿ 2017-18ನೇ ಸಾಲಿನಿಂದ ಕಾರ್ಯಾರಂಭಗೊಳಿಸಲಾದೆ. ಮುಂದುವರೆದು, ಸದರಿ ಅರ್ಥಶಾಸ್ತ್ರ ವಿದ್ಯಾಲಯವನ್ನು ಬೆಂಗಳೂರು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ ಅಧಿನಿಯಮ, 2019(2019ರ ಕರ್ನಾಟಕ ಅಧಿನಿಯಮ ಸಂಖ್ಯೆ:20)ನ್ನು ಜಾರಿಗೆ ತರುವ ಮೂಲಕ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವನ್ನಾಗಿ ಉನ್ನತೀಕರಿಸಲಾಗಿದೆ.

--2

Dr. B.R. Ambedkar School of Economics
I.No: 319
Dated: 01/ /21
Bangalore

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣದಲ್ಲಿ ಲೀಸ್ ಆಧಾರದ ಮೇಲೆ ಮಂಜೂರು ಮಾಡಲಾದ ಒಟ್ಟು 43.35 ಎಕರೆ ಜಮೀನಿನಲ್ಲಿ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಯೋಜಿಸಲಾದ ಮೊದಲ ಹಂತದ ಕಾಮಗಾರಿಗಳ ಅಂದಾಜು ರೂ 182.00 ಕೋಟಿಗಳಿಗೆ (ಒಂದು ನೂರ ಎಂಭತ್ತೆರಡು ಕೋಟಿ ರೂಪಾಯಿಗಳು) ಮೇಲೆ ಕ್ರಮಸಂಖ್ಯೆ(2)ರಲ್ಲಿ ಓದಲಾದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ, ರೂ. 166,99,51,876/- ಗಳ (ಒಂದು ನೂರ ಅರವತ್ತಾರು ಕೋಟಿ ತೊಂಭತ್ತೊಂಭತ್ತು ಲಕ್ಷ ಐವತ್ತೊಂದು ಸಾವಿರದ ಎಂಟು ನೂರ ಎಪ್ಪತ್ತಾರು ರೂಪಾಯಿಗಳು ಮಾತ್ರ) ಮೊತ್ತಕ್ಕೆ M/s B.G.Shirke Construction Technology Pvt.Ltd. ಇವರಿಗೆ ಟೆಂಡರ್ ಕಾರ್ಯಾದೇಶ ನೀಡಲು ಅನುಮತಿಸಲಾಗಿದೆ.

ಪೂರ್ವೋಕ್ತ ಆಡಳಿತಾತ್ಮಕ ಅನುಮೋದನೆ ಮೇರೆಗೆ ಕಾರ್ಯಾರಂಭಗೊಂಡು ಸಮರೋಪಾದಿಯಲ್ಲಿ ಪ್ರಗತಿಯಲ್ಲಿರುವ ಹಾಗೂ ಅಂತಿಮ ಚರಣದಲ್ಲಿರುವ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೊದಲ ಹಂತದ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ಪೈಕಿ ಮುಕ್ತಾಯಗೊಂಡ ಅಕಾಡೆಮಿಕ್ ಬ್ಲಾಕ್ ಹಾಗೂ ಗ್ರಂಥಾಲಯ ಕಟ್ಟಡಗಳ ಒಳಾಂಗಣ ವಿನ್ಯಾಸ ಕಾಮಗರಿಗಳ ಅಂದಾಜು ರೂ 7, 09,00,000/-ಗಳಿಗೆ ಮೇಲೆ ಓದಲಾದ ಕ್ರಮಸಂಖ್ಯೆ: (3)ರಲ್ಲಿ ಆದೇಶದಲ್ಲಿ ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ನಿರ್ಮಾಣ ಪೂರ್ಣಗೊಂಡಿರುವ ಅಡ್ಮಿನಿಸ್ಟ್ರೇಷನ್ ಬ್ಲಾಕ್ ಹಾಗೂ ಸ್ಟುಡೆಂಟ್ ಸೆಂಟರ್ ಬ್ಲಾಕ್ ಕಟ್ಟಡಗಳ ಒಳಾಂಗಣ ವಿನ್ಯಾಸ ಕಾಮಗಾರಿಗಳ ಒಟ್ಟು ರೂ. 4,25,000/-ಗಳ ಅಂದಾಜುಗಳಿಗೆ ಸರ್ಕಾರದ ಆಡಳತಾತ್ಮಕ ಅನುಮೋದನೆ ಕೋರಿ ಮೇಲೆ ಕ್ರಮಸಂಖ್ಯೆ(4)ರಲ್ಲಿ ಓದಲಾದ ಏಕ ಕಡತದ ಮೂಲಕ ಅಂದಾಜು ಪಟ್ಟಿ ಹಾಗೂ ರೇಖಾನಕ್ಷೆಗಳನ್ನೊಳಗೊಂಡ ಯೋಜನಾ ವರದಿಯೊಂದಿಗೆ ಸಲ್ಲಿಸಲಾಗಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೊದಲ ಹಂತದ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ಪೈಕಿ ಅಡ್ಮಿನಿಸ್ಟ್ರೇಷನ್ ಬ್ಲಾಕ್ ಹಾಗೂ ಸ್ಟುಡೆಂಟ್ ಸೆಂಟರ್ ಬ್ಲಾಕ್ ಕಟ್ಟಡಗಳ ಒಳಾಂಗಣ ವಿನ್ಯಾಸಕ್ಕೆ ಅತ್ಯವಶ್ಯಕವಾಗಿರುವ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿ ಸಲ್ಲಿಸಲಾಗಿರುವ

--3

ಪೂರ್ವಸೂಚಿತ ಪ್ರಸ್ತಾವನೆಯು ಈ ಕೆಳಕಂಡಂತೆ ರೂ. 4,25,000/-ಗಳ ಅಂದಾಜುಗಳ ಲಘು ಕ್ರಿಯಾಯೋಜನೆಯ ಕಾಮಗಾರಿ ಘಟಕಗಳು ಹಾಗೂ ವೆಚ್ಚದ ವಿವರಗಳನ್ನು ಒಳಗೊಂಡಿರುತ್ತದೆ.

| ಕ್ರ.ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ(ರೂ.ಗಳಲ್ಲಿ) |
|---|---|---|
| 1 | ಆಡ್ಮಿನಿಸ್ಟ್ರೇಷನ್ ಬ್ಲಾಕ್ ಕಟ್ಟಡದ ಒಳಾಂಗಣ ವಿನ್ಯಾಸ ಕಾಮಗಾರಿಗಳು | 1,30,88,013/- |
| 2 | ಸ್ಟುಡೆಂಟ್ ಸೆಂಟರ್ ಬ್ಲಾಕ್ ಕಟ್ಟಡದ ಒಳಾಂಗಣ ವಿನ್ಯಾಸ ಕಾಮಗಾರಿಗಳು | 2,25,62,499/- |
| 3 | ಮೂಲ ಅಂದಾಜು ಮೊತ್ತ | 3,56,50,512/- |
| 4 | ಟೆಂಡರ್ ಪ್ರೀಮಿಯಂ ಹಾಗೂ ದರ ಏರಿಕೆ/ವ್ಯತ್ಯಯದ ಪರಿಣಾಮದಿಂದಾಗಿ ಶೇ.10ರ ದರದಲ್ಲಿ ಕಲ್ಪಿಸಲಾಗಿರುವ ಅವಕಾಶ | 35,65,051/- |
| 5 | ನಿವ್ವಳ ಅಂದಾಜು(3+4) | 3,92,15,563/- |
| 6 | ಪಿ.ಎಂ.ಸಿ ಮತ್ತು ಕೆ.ಹೆಚ್.ಬಿ ಎ & ಎಸ್ ಶುಲ್ಕ (ಶೇ.5 ರ ದರದಲ್ಲಿ) | 19,60,778/- |
| 7 | ಎ.ಇ.ಎಫ್ ಶುಲ್ಕ (2.75%) ಮತ್ತು ಜಿ.ಎಸ್.ಟಿ.(18%) | 12,72,545/- |
| 8 | ಇತರೆ ಮತ್ತು ಪೂರ್ಣಾಂಕಗೊಳಿಸುವುದು | 51,113/- |
| 9 | ಒಟ್ಟಾರೆ ಯೋಜನಾ ಅಂದಾಜು ವೆಚ್ಚ (5+6+7+8) | 4,25,00,000/- |

ಪೂರ್ವಪ್ರಸ್ತಾಪಿತ ಅಂದಾಜುಗಳಲ್ಲಿ ಪಿ.ಎಂ.ಸಿ. ಹಾಗೂ ಕೆ.ಹೆಚ್.ಬಿ ಎ & ಎಸ್(Administrative & Service) ಶುಲ್ಕವನ್ನು ನಿವ್ವಳ ಅಂದಾಜಿನ ಶೇ 5 ರ ದರದಲ್ಲಿ ಲೆಕ್ಕಾಚಾರ ಮಾಡಲಾಗಿದೆ. ಮುಂದುವರೆದು, ನಿವ್ವಳ ಅಂದಾಜಿನ ಶೇ 2.75 ರ ದರದಲ್ಲಿ ಎಇಎಫ್(Architecture Engineering Fee) ಶುಲ್ಕ ನಿಗದಿಪಡಿಸಿ, ಈ ರೀತಿ ಲಭ್ಯವಾಗುವ ಮೊತ್ತದ ಶೇ 18 ರಷ್ಟು ಜಿಎಸ್‌ಟಿ ತೆರಿಗೆಯನ್ನು ಪರಿಗಣಿಸಲಾಗಿದೆ.

ಹತ್ತು ಕೋಟಿ ರೂ.ಗಳನ್ನು ಮೀರದ ಕಾಮಗಾರಿ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಆಡಳಿತ ಇಲಾಖೆಯ ಕಾರ್ಯದರ್ಶಿಗಳಿಗೆ ಅಧಿಕಾರ ಪ್ರದತ್ತವಾಗಿದ್ದು. ಈ ರೀತಿ ಯಾವುದೇ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಬೇಕಾದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ:10.07.1996ರ ಕಂಡಿಕೆ 46ರಲ್ಲಿ ನಿರ್ದಿಷ್ಟಪಡಿಸಿರುವಂತೆ ಸದರಿ ಕಾಮಗಾರಿಯ ಮೂಲ ಅಂದಾಜಿನ ಶೇ.30ಕ್ಕಿಂತ ಕಡಿಮೆ ಇರದಷ್ಟು ಅನುದಾನವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಲಭ್ಯವಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕಾಗುತ್ತದೆ.

ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೊದಲ ಹಂತದ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ನಿರ್ವಹಣೆಗಾಗಿ ಸಮಾಜ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ:ಸಕಇ 295 ಪಕವಿ 2019(ಭಾಗ), ದಿನಾಂಕ:07.02.2020ರಲ್ಲಿ ರೂ 35.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಗೆ ಈ ಹಿಂದೆ ಬಿಡುಗಡೆ ಮಾಡಲಾದ ರೂ.106.96 ಕೋಟಿಗಳ ಪೈಕಿ ಉಳಿಕೆಯಲ್ಲಿರುವ ಅನುದಾನ ಸೇರಿದಂತೆ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಸ್ತುತ ಬಿಡುಗಡೆ ಮಾಡಲಾಗಿರುವ ಅನುದಾನದ ಪ್ರಮಾಣ ಒಟ್ಟಾರೆ ಅಂದಾಜಿನ ಶೇ.30ಕ್ಕಿಂತ ಹೆಚ್ಚಿರುವುದನ್ನು ದೃಢಪಡಿಸಿಕೊಳ್ಳಲಾಗಿದೆ.

ಮೂಲತಃ ಒಬ್ಬ ಅರ್ಥಶಾಸ್ತ್ರಜ್ಞರಾದ ಡಾ: ಬಿ.ಆರ್.ಅಂಬೇಡ್ಕರ್ ಇವರ ಆರ್ಥಿಕ ದೂರದೃಷ್ಟಿ ಹಾಗೂ ಪರಿಕಲ್ಪನೆಗಳನ್ನು ಸಾಕಾರಗೊಳಿಸಲು, ಖ್ಯಾತ ಆರ್ಥಿಕ ತಜ್ಞರನ್ನು, ಶೈಕ್ಷಣಿಕ ಮತ್ತು ಸಾಂಸ್ಥಿಕ ಸ್ವಾಯತ್ತತೆ ಹಾಗೂ ಸ್ವಾವಲಂಬಿತನ ರೂಪಿಸಲು ಅನುವಾಗುವ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವ ಸಲುವಾಗಿ ಸ್ಥಾಪಿಸಿ 2017-18ನೇ ಸಾಲಿನಿಂದ ಕಾರ್ಯಾರಂಭಗೊಳಿಸಲಾಗಿರುವ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಅನ್ನು ಬೆಂಗಳೂರು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ ಅಧಿನಿಯಮ,2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ:20) ನ್ನು ಜಾರಿಗೆ ತರುವ ಮೂಲಕ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವನ್ನಾಗಿ ಉನ್ನತೀಕರಿಸಲಾಗಿದೆ. ಸದರಿ ವಿಶ್ವವಿದ್ಯಾಲಯದ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ ಕಟ್ಟಡ ಮತ್ತು ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳನ್ನು ಕಾಲಬದ್ಧವಾಗಿ

ಪೂರ್ಣಗೊಳಿಸುವುದು ಅಜ್ಞಾಪಕವಾಗುವ ಕಾರಣ ಪ್ರಸಕ್ತ ಪ್ರಸ್ತಾವನೆಯು ಯುಕ್ತ ಹಾಗೂ ಅತ್ಯಂತ ಸಮರ್ಥನೀಯವಾಗಿರುವುದನ್ನು ಪರಿಗಣಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ /125/ಯಬಿವಿ/2020, ಬೆಂಗಳೂರು , ದಿನಾಂಕ:31.12.2020:**

ಪೂರ್ವ ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಏಕಾತ್ಮಕ ವಿಶ್ವವಿದ್ಯಾಲಯವನ್ನಾಗಿ ಉನ್ನತೀಕರಿಸಲಾಗಿರುವ ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಮೊದಲ ಹಂತದ ಮೂಲಸೌಕರ್ಯ ನಿರ್ಮಾಣ ಕಾಮಗಾರಿಗಳ ಪೈಕಿ ಅಡ್ಮಿನಿಸ್ಟ್ರೇಷನ್ ಬ್ಲಾಕ್ ಹಾಗೂ ಸ್ಟುಡೆಂಟ್ ಸೆಂಟರ್ ಬ್ಲಾಕ್ ಕಟ್ಟಡಗಳ ಒಳಾಂಗಣ ವಿನ್ಯಾಸಕ್ಕೆ ಯೋಜಿಸಲಾಗಿರುವ ಕಾಮಗಾರಿಗಳ ರೂ. 4,25,00,000/- (ನಾಲ್ಕು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಮೊತ್ತದ ಅಂದಾಜುಗಳಿಗೆ, ಪ್ರಸ್ತಾಪಿತ ಕಾಮಗಾರಿಗಳಿಗೆ ಸರ್ಕಾರದಿಂದ ಯಾವುದೇ ಹೆಚ್ಚುವರಿ ಅನುದಾನವನ್ನು ಕೋರಬಾರದೆಂಬ ಹಾಗೂ ಸರ್ಕಾರದಿಂದದ ಈಗಾಗಲೇ ಹಿಂದೆ ಒದಗಿಸಲಾಗಿರುವ ಅನುದಾನದ ಲಭ್ಯತೆಯ ಮಿತಿಯಲ್ಲಿಯೇ ಪ್ರಸ್ತಾಪಿತ ಕಾಮಗರಿಗಳನ್ನು ಕೈಗೊಳ್ಳಬೇಕೆಂಬ ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಮುಂದುವರೆದು, ಈ ಆದೇಶದನ್ವಯ ನೀಡಲಾಗಿರುವ ಆಡಳಿತಾತ್ಮಕ ಅನುಮೋದನೆಯು ಈ ಕೆಳಕಂಡ ನಿಬಂಧನೆ/ಸೂಚನೆಗಳನ್ನು ಕಡ್ಡಾಯವಾಗಿ ಪರಿಪಾಲಿಸುವುದನ್ನು ಅಗತ್ಯಪಡಿಸುತ್ತದೆ.

1 *ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರಡಿ ರಚಿಸಲಾದ ನಿಯಮಗಳಲ್ಲಿ ಗೊತ್ತುಪಡಿಸಲಾಗಿರುವ ಉಪಬಂಧಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ಕಾಮಗಾರಿಗಳನ್ನು ಅತ್ಯಂತ ಪಾರದರ್ಶಕವಾಗಿ ನಿರ್ವಹಿಸತಕ್ಕದ್ದು;*

2 *ಕಾಮಗಾರಿಗಳ ಅಂದಾಜುಗಳಿಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿ ಪಡೆಯತಕ್ಕದ್ದು;*

3 *ಟೆಂಡರ್ ಪ್ರೀಮಿಯಂನ್ನು ಮೂಲ ಅಂದಾಜಿನ ಶೇ. 10 ಕ್ಕೆ ಮಾತ್ರ ಸೀಮಿತಗೊಳಿಸತಕ್ಕದ್ದು ಹಾಗೂ ಟೆಂಡರ್ ಪ್ರೀಮಿಯಂನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ;*

4 ಕಟ್ಟಡದ ಗುಣಮಟ್ಟವನ್ನು ಪರಿಶೀಲಿಸಲು 3ನೇ ವ್ಯಕ್ತಿ ಅಥವಾ ಪರಿವೀಕ್ಷಣಾ ತಪಾಸಣೆ ನಡೆಸತಕ್ಕದ್ದು:

5 ಪ್ರಸ್ತಾವಿತ ಕಾಮಗಾರಿಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸಲು ಕ್ರಮವಹಿಸತಕ್ಕದ್ದು:

6 ಉನ್ನತ ಶಿಕ್ಷಣ ಇಲಾಖೆಯು ಕಾಲಕಾಲಕ್ಕೆ ಕಾಮಗಾರಿಗಳ ಬಗ್ಗೆ ಪರಿಶೀಲನೆ ಅಥವಾ ಪರಿವೀಕ್ಷಣೆ ನಡೆಸುವ ಅಧಿಕಾರ ಹೊಂದಿರುತ್ತದೆ

7 ಆಡಳಿತಾತ್ಮಕ ಅನುಮೋದನೆಯನ್ನು ಹೆಚ್ಚಿನ ಅನುದಾನ ಬಿಡುಗಡೆಗೆ ಮಂಜೂರಾತಿ ಎಂದು ಪರಿಭಾವಿಸತಕ್ಕದ್ದಲ್ಲ ಅಥವಾ ಅರ್ಥೈಸಿಕೊಳ್ಳತಕ್ಕದ್ದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 316 ವೆಚ್ಚ-8/2020, ದಿನಾಂಕ:11.09.2020ರಲ್ಲಿ ನೀಡಲಾದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹೇಶ ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2)

31/12/2020

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ/ಆಡಿಟ್), ಕರ್ನಾಟಕ, ಬೆಂಗಳೂರು-560 001
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

--7

4) ಕುಲಪತಿಗಳು, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ರಾಜಾಜಿ ಹಾಲ್, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-560 001

5) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು

6) ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು.

7) ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

8) ಕುಲಸಚಿವರು, ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ರಾಜಾಜಿ ಹಾಲ್, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-560 001

9) ಮುಖ್ಯ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು

10) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.

11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

ಪ್ರತಿಗಳು:

1) ಮಾನ್ಯ ಉಪಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ) ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.

3) ಸರ್ಕಾರದ ಉಪಕಾರ್ಯದರ್ಶಿ (ವಿಶ್ವವಿದ್ಯಾಲಯಗಳು)ಯವರ ಆಪ್ತ ಸಹಾಯಕರು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರಿನ ಮೂಲಭೂತ ಸೌಕರ್ಯಗಳ (Furnishing) ವೆಚ್ಚ ಭರಿಸಲು ಅನುದಾನ ಒದಗಿಸುವ ಬಗ್ಗೆ.

ಓದಲಾಗಿದೆ:-

1. ಕುಲಸಚಿವರು, ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: BASE/FIN/030/2021-22, ದಿನಾಂಕ: 29.01.2022.
2. ಕುಲಸಚಿವರು, ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: BASE/35/2020, ದಿನಾಂಕ: 05.03.2022.
3. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 314 ಬಿಆರ್‌ಎಸ್ 2021, ದಿನಾಂಕ: 05.02.2022.

ಪ್ರಸ್ತಾವನೆ:-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 29.01.2022ರ ಪ್ರಸ್ತಾವನೆಯಲ್ಲಿ ಕುಲಸಚಿವರು, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರು 2022-23ನೇ ಸಾಲಿನಲ್ಲಿ ಸದರಿ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳಿಗಾಗಿ ಮತ್ತು ಮೂಲಧನ ಆವರ್ತಕ ವೆಚ್ಚಗಳಿಗೆ ರೂ.107.47 ಕೋಟಿಗಳನ್ನು ಒದಗಿಸುವ ಕೋರಿರುತ್ತಾರೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ: 05.02.2022ರ ಪ್ರಸ್ತಾವನೆಯಲ್ಲಿ ಕುಲಸಚಿವರು, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರು ಬೆಂಗಳೂರು ಜಲಮಂಡಳಿಯಿಂದ ನೀರು ಸರಬರಾಜು ಮತ್ತು ಒಳಚರಂಡಿ ಸಂಪರ್ಕ ಪಡೆಯಲು ಪಾವತಿಸಬೇಕಾಗಿರುವ ಶುಲ್ಕ ಜೊತೆಗೆ ರಸ್ತೆ ಕತ್ತರಿಸುವ ಶುಲ್ಕ ಮತ್ತು ಸಂಪರ್ಕ ಕಾಮಗಾರಿ ನಿರ್ವಹಿಸಲು ರೂ.3,25,00,000/-ಕ್ಕೆ ಅನುಮೋದನೆ ನೀಡಿ ಅನುದಾನವನ್ನು ಮಂಜೂರು ಮಾಡಿಕೊಡಲು ಕೋರಿರುತ್ತಾರೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ: 05.02.2022ರ ಆದೇಶದಲ್ಲಿ ಆರ್ಥಿಕ ಇಲಾಖೆಯು 2021-22ನೇ ಸಾಲಿಗೆ ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ (Furnishing) ವೆಚ್ಚವನ್ನು ಭರಿಸುವ ಸಲುವಾಗಿ ರೂ.2500.00 ಲಕ್ಷ (Rupees Two thousand five hundred lakh only)ಗಳನ್ನು ಲೆಕ್ಕ ಶೀರ್ಷಿಕೆ: 4202-01-203-1-01-ಪ್ರಥಮ ದರ್ಜೆ ಮಹಾವಿದ್ಯಾಲಯ ಕಟ್ಟಡಗಳು-422-ಪರಿಶಿಷ್ಟ ಜಾತಿ ಉಪಯೋಜನ ಅಡಿ ಹೆಚ್ಚುವರಿಯಾಗಿ ಮಂಜೂರು ಮಾಡಿದೆ.

ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ (Furnishing) ವೆಚ್ಚವನ್ನು ಭರಿಸುವ ಸಲುವಾಗಿ ರೂ.2500.00 ಲಕ್ಷ (Rupees Two thousand five hundred lakh only)ಗಳನ್ನು ಲೆಕ್ಕ ಶೀರ್ಷಿಕೆ: 4202-01-203-1-01-ಪ್ರಥಮ ದರ್ಜೆ ಮಹಾವಿದ್ಯಾಲಯ ಕಟ್ಟಡಗಳು-422-ಪರಿಶಿಷ್ಟ ಜಾತಿ ಉಪಯೋಜನ ಅಡಿ ಹೆಚ್ಚುವರಿಯಾಗಿ ಬಿಡುಗಡೆಗೊಳಿಸಲು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲು ನಿರ್ಧರಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಡಿ 126 ಯೂಪಿಯು 2021,
ಬೆಂಗಳೂರು, ದಿನಾಂಕ: 08ನೇ ಮಾರ್ಚ್, 2022.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ (Furnishing) ವೆಚ್ಚವನ್ನು ಭರಿಸುವ ಸಲುವಾಗಿ ರೂ.2500.00 ಲಕ್ಷ (Rupees Two thousand five hundred lakh only)ಗಳನ್ನು



Scanned with CamScanner

ಲೆಕ್ಕ ಶೀರ್ಷಿಕೆ: 4202-01-203-1-01-ಪ್ರಥಮ ದರ್ಜೆ ಮಹಾವಿದ್ಯಾಲಯ ಕಟ್ಟಡಗಳು-422-ಪರಿಶಿಷ್ಟ ಉಪಯೋಜನ ಅಡಿ ಹೆಚ್ಚುವರಿಯಾಗಿ ಬಿಡುಗಡೆಗೊಳಿಸಿ ಆದೇಶಿಸಿದ್ದು, ಸದರಿ ಅನುದಾನವನ್ನು ಆಯು[illegible] ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಸ್ಕೂ[illegible] ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡುವುದು.

ಮುಂದುವರೆದು, ಅನುದಾನ ಬಳಕೆಗೆ ಸಂಬಂಧಿಸಿದಂತೆ ಕುಲಸಚಿವರು, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು:

1) ಬಿ.ಡಬ್ಲ್ಯೂ.ಎಸ್.ಎಸ್.ಬಿ.ಗೆ ಬಿಡುಗಡೆ ಮಾಡಬೇಕಾದ ರೂ.3.25ಕೋಟಿಗಳನ್ನು ನಿಯಮಾನುಸಾರ ಬಿಡುಗಡೆ ಮಾಡುವುದು.
2) ಈವರೆಗೆ ಆಡಳಿತಾತ್ಮಕ ಅನುಮೋದನೆ ನೀಡಿರುವ ಕಾಮಗಾರಿಗಳಿಗೆ ಬಿಡುಗಡೆಯಾಗಿ ಇನ್ನೂ ಬಾಕಿ ಉಳಿದಿರುವ ಅಂದಾಜು ರೂ.2.64ಕೋಟಿಗಳನ್ನು ಬಿಡುಗಡೆ ಮಾಡಲು ಪ್ರತ್ಯೇಕ ಪ್ರಸ್ತಾವನೆಯನ್ನು ಸಲ್ಲಿಸಿ, ಸರ್ಕಾರದ ಅನುಮೋದನೆಯೊಂದಿಗೆ ಬಿಡುಗಡೆ ಮಾಡುವುದು.
3) ರೂ.7.00 ಕೋಟಿ ಅಂದಾಜಿನ ಕಾಮಗಾರಿಗಳಿಗೆ ಅಂದಾಜು ರೂ.1.28 ಕೋಟಿ ಹೆಚ್ಚುವರಿಯಾಗಿದ್ದು, ಇದಕ್ಕೆ ಸವಿವರ ಪ್ರಸ್ತಾವನೆಯನ್ನು ಸಲ್ಲಿಸಿ ಸರ್ಕಾರದ ಅನುಮೋದನೆ ಪಡೆದ ನಂತರ ಅನುದಾನ ಬಿಡುಗಡೆಗೊಳಿಸುವುದು.
4) ಭೂ ಸಮತಟ್ಟಿನ ಕಾಮಗಾರಿಗಳಿಗೆ ಆಗಿರುವ ನೈಜ ವೆಚ್ಚಕ್ಕೆ ಅನುಮೋದನೆ ಪಡೆದಿರುವ ಪ್ರತಿಯೊಂದಿಗೆ ಸವಿವರ ಪ್ರಸ್ತಾವನೆ ಸಲ್ಲಿಸಿ ಸರ್ಕಾರದ ಅನುಮೋದನೆ ಪಡೆದ ನಂತರ ಅನುದಾನ ಬಿಡುಗಡೆಗೊಳಿಸುವುದು.
5) ಇನ್ನುಳಿದಂತೆ ಅಂದಾಜು ರೂ.17.00ಕೋಟಿಗಳ ಹೆಚ್ಚುವರಿ ಕಾಮಗಾರಿಗಳಿಗೆ ಸವಿವರ ನಕ್ಷೆ ಮತ್ತು ಅಂದಾಜು ಸವಿವರ ಪ್ರಸ್ತಾವನೆ ಸಲ್ಲಿಸಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದ ನಂತರ ಅನುದಾನ ಬಿಡುಗಡೆ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 63 ವೆಚ್ಚ-8/2022, ದಿನಾಂಕ: 10.02.2022ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,

08/03/2022

(ಎಂ.ಜಿ.ವೆಂಕಟೇಶಯ್ಯ)
ಸರ್ಕಾರದ ಉಪ ಕಾರ್ಯದರ್ಶಿ,
(ತಾಂತ್ರಿಕ ಶಿಕ್ಷಣ ಮತ್ತು ಯೋಜನ)
ಉನ್ನತ ಶಿಕ್ಷಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಕುಲಸಚಿವರು, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು.
4. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಅಪರ ನಿರ್ದೇಶಕರು, ಟಿಎನ್‌ಎಂಸಿ, ಖನಿಜಭವನ, ಬೆಂಗಳೂರು.
7. ಜಿಲ್ಲಾ ಖಜಾನಾಧಿಕಾರಿಗಳು, ಬೆಂಗಳೂರು.
8. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)ರವರ ಆಪ್ತ ಕಾರ್ಯದರ್ಶಿಗಳು.
10. ಸರ್ಕಾರದ ಉಪ ಕಾರ್ಯದರ್ಶಿ (ಎಫ್‌ಆರ್ ಮತ್ತು ಬಿಸಿಸಿ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
11. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಪ್ರತಿ.



Scanned with CamScanner

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರಿನ ಮೂಲಭೂತ ಸೌಕರ್ಯಗಳ ಸಲುವಾಗಿ ಅನುದಾನ ಒದಗಿಸುವ ಬಗ್ಗೆ.

ಓದಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 647 ಬಿಆರ್‌ಎಸ್ 2021, ದಿನಾಂಕ: 10.03.2022.

ಪ್ರಸ್ತಾವನೆ:-

ಮೇಲೆ ಓದಲಾದ ದಿನಾಂಕ: 10.03.2022ರ ಆದೇಶದಲ್ಲಿ, ಆರ್ಥಿಕ ಇಲಾಖೆಯು 2021-22ನೇ ಆರ್ಥಿಕ ಸಾಲಿಗೆ ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ ಸಲುವಾಗಿ ರೂ.1500.00 ಲಕ್ಷ (Rupees one thousand five hundred lakhs only)ಗಳನ್ನು ಲೆಕ್ಕ ಶೀರ್ಷಿಕೆ: 4202-01-203-1-01-ಪ್ರಥಮ ದರ್ಜೆ ಮಹಾವಿದ್ಯಾಲಯ ಕಟ್ಟಡಗಳು-422-ಪರಿಶಿಷ್ಟ ಜಾತಿ ಉಪಯೋಜನೆ ಅಡಿ ಹೆಚ್ಚುವರಿಯಾಗಿ ಮಂಜೂರು ಮಾಡಿದೆ.

ಅದರಂತೆ ಪರಿಶೀಲಿಸಿ ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯಕ್ಕೆ ಈ ಕೆಳಕಂಡಂತೆ ಅನುದಾನ ಬಿಡುಗಡೆಗೊಳಿಸಿ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: ಇಡಿ 126 ಹೆಚ್‌ಪಿಯು 2021, ಬೆಂಗಳೂರು, ದಿನಾಂಕ: 22ನೇ ಮಾರ್ಚ್, 2022.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ ಸಲುವಾಗಿ ರೂ.1500.00ಲಕ್ಷ (Rupees one thousand five hundred lakhs only)ಗಳನ್ನು ಲೆಕ್ಕ ಶೀರ್ಷಿಕೆ: 4202-01-203-1-01-ಪ್ರಥಮ ದರ್ಜೆ ಮಹಾವಿದ್ಯಾಲಯ ಕಟ್ಟಡಗಳು-422-ಪರಿಶಿಷ್ಟ ಜಾತಿ ಉಪಯೋಜನೆ ಅಡಿ ಹೆಚ್ಚುವರಿಯಾಗಿ ಬಿಡುಗಡೆಗೊಳಿಸಿ ಆದೇಶಿಸಿದ್ದು, ಸದರಿ ಅನುದಾನವನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡುವುದು.

ಮುಂದುವರೆದು, ಅನುದಾನ ಬಳಕೆಗೆ ಸಂಬಂಧಿಸಿದಂತೆ ಕುಲಸಚಿವರು, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು;

1. ರೂ.1500.00 ಲಕ್ಷಗಳ ಹೆಚ್ಚುವರಿ ಅನುದಾನದ ಸಂಬಂಧ ಅಂದಾಜು ಸವಿವರ ಪ್ರಸ್ತಾವನೆ ಸಲ್ಲಿಸಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದ ನಂತರ ಅನುದಾನ ಬಿಡುಗಡೆ ಮಾಡುವುದು.
2. ಯಾವ ಉದ್ದೇಶಕ್ಕಾಗಿ ಅನುದಾನ ಒದಗಿಸಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದ್ದು.
3. ಕಡ್ಡಾಯವಾಗಿ ನಿಗದಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನುಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 63 ವೆಚ್ಚ-8/2022, ದಿನಾಂಕ: 15.03.2022ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,

(signature) 21/03/2022
(ಎಂ.ಜಿ.ವೆಂಕಟೇಶಯ್ಯ)
ಸರ್ಕಾರದ ಉಪ ಕಾರ್ಯದರ್ಶಿ,
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಕುಲಸಚಿವರು, ಡಾ; ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು.
4. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಅಪರ ನಿರ್ದೇಶಕರು, ಟಿಎನ್ಎಂಸಿ, ಖನಿಜಭವನ, ಬೆಂಗಳೂರು.
7. ಜಿಲ್ಲಾ ಖಜಾನಾಧಿಕಾರಿಗಳು, ಬೆಂಗಳೂರು.
8. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)ರವರ ಆಪ್ತ ಕಾರ್ಯದರ್ಶಿಗಳು.
10. ಸರ್ಕಾರದ ಉಪ ಕಾರ್ಯದರ್ಶಿ (ಎಫ್ಆರ್ ಮತ್ತು ಬಿಸಿಸಿ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
11. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರಿನ ಮೂಲಭೂತ ಸೌಕರ್ಯಗಳ ಸಲುವಾಗಿ ಅನುದಾನ ಒದಗಿಸುವ ಬಗ್ಗೆ.

ಓದಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 647 ಬಿಆರ್‌ಎಸ್ 2021, ದಿನಾಂಕ: 10.03.2022.

ಪ್ರಸ್ತಾವನೆ:-

ಮೇಲೆ ಓದಲಾದ ದಿನಾಂಕ: 10.03.2022ರ ಆದೇಶದಲ್ಲಿ, ಆರ್ಥಿಕ ಇಲಾಖೆಯು 2021-22ನೇ ಆರ್ಥಿಕ ಸಾಲಿಗೆ ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ ಸಲುವಾಗಿ ರೂ.1500.00 ಲಕ್ಷ (Rupees one thousand five hundred lakhs only)ಗಳನ್ನು ಲೆಕ್ಕ ಶೀರ್ಷಿಕೆ: 4202-01-203-1-01-ಪ್ರಥಮ ದರ್ಜೆ ಮಹಾವಿದ್ಯಾಲಯ ಕಟ್ಟಡಗಳು-422-ಪರಿಶಿಷ್ಟ ಜಾತಿ ಉಪಯೋಜನೆ ಅಡಿ ಹೆಚ್ಚುವರಿಯಾಗಿ ಮಂಜೂರು ಮಾಡಿದೆ.

ಅದರಂತೆ ಪರಿಶೀಲಿಸಿ ಡಾ: ಬಿ.ಆರ್.ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯಕ್ಕೆ ಈ ಕೆಳಕಂಡಂತೆ ಅನುದಾನ ಬಿಡುಗಡೆಗೊಳಿಸಿ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: ಇಡಿ 126 ಹೆಚ್‌ಪಿಯು 2021, ಬೆಂಗಳೂರು, ದಿನಾಂಕ: 22ನೇ ಮಾರ್ಚ್, 2022.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ ಸಲುವಾಗಿ ರೂ.1500.00ಲಕ್ಷ (Rupees one thousand five hundred lakhs only)ಗಳನ್ನು ಲೆಕ್ಕ ಶೀರ್ಷಿಕೆ: 4202-01-203-1-01-ಪ್ರಥಮ ದರ್ಜೆ ಮಹಾವಿದ್ಯಾಲಯ ಕಟ್ಟಡಗಳು-422-ಪರಿಶಿಷ್ಟ ಜಾತಿ ಉಪಯೋಜನೆ ಅಡಿ ಹೆಚ್ಚುವರಿಯಾಗಿ ಬಿಡುಗಡೆಗೊಳಿಸಿ ಆದೇಶಿಸಿದ್ದು, ಸದರಿ ಅನುದಾನವನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಈ ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡುವುದು.

ಮುಂದುವರೆದು, ಅನುದಾನ ಬಳಕೆಗೆ ಸಂಬಂಧಿಸಿದಂತೆ ಕುಲಸಚಿವರು, ಡಾ: ಬಿ.ಆರ್. ಅಂಬೇಡ್ಕರ್ ಸ್ಕೂಲ್ ಅಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇವರು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು;

1. ರೂ.1500.00 ಲಕ್ಷಗಳ ಹೆಚ್ಚುವರಿ ಅನುದಾನದ ಸಂಬಂಧ ಅಂದಾಜು ಸವಿವರ ಪ್ರಸ್ತಾವನೆ ಸಲ್ಲಿಸಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದ ನಂತರ ಅನುದಾನ ಬಿಡುಗಡೆ ಮಾಡುವುದು.
2. ಯಾವ ಉದ್ದೇಶಕ್ಕಾಗಿ ಅನುದಾನ ಒದಗಿಸಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದ್ದು.
3. ಕಡ್ಡಾಯವಾಗಿ ನಿಗದಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನುಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 63 ವೆಚ್ಚ-8/2022, ದಿನಾಂಕ: 15.03.2022ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,

(ಸಹಿ) 21/03/2022

(ಎಂ.ಜಿ.ವೆಂಕಟೇಶಯ್ಯ)
ಸರ್ಕಾರದ ಉಪ ಕಾರ್ಯದರ್ಶಿ,
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಕುಲಸಚಿವರು, ಡಾ; ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು.
4. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಅಪರ ನಿರ್ದೇಶಕರು, ಟಿಎನ್‌ಎಂಸಿ, ಖನಿಜಭವನ, ಬೆಂಗಳೂರು.
7. ಜಿಲ್ಲಾ ಖಜಾನಾಧಿಕಾರಿಗಳು, ಬೆಂಗಳೂರು.
8. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)ರವರ ಆಪ್ತ ಕಾರ್ಯದರ್ಶಿಗಳು.
10. ಸರ್ಕಾರದ ಉಪ ಕಾರ್ಯದರ್ಶಿ (ಎಫ್‌ಆರ್ ಮತ್ತು ಬಿಸಿಸಿ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
11. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಪ್ರತಿ.